# ಘನತೆ ಮತ್ತು ನ್ಯಾಯದೆಡೆಗೆ...




## ಜಾಗೃತ ಮಹಿಳಾ ಸಂಘಟನೆ (ಜೆ.ಎಂ.ಎಸ್)
## ದಲಿತ ಮಾದಿಗ ಮಹಿಳಾ ಸಮಷ್ಟಿಯ ಕಥೆ

# ಘನತೆ ಮತ್ತು ನ್ಯಾಯದೆಡೆಗೆ

## ಜಾಗೃತ ಮಹಿಳಾ ಸಂಘಟನೆ (ಜೆ.ಎಂ.ಎಸ್)
## ದಲಿತ ಮಾದಿಗ ಮಹಿಳಾ ಸಮಷ್ಟಿಯ ಕಥೆ

ಜಾಗೃತ ಮಹಿಳಾ ಸಂಘಟನೆ
ಕೆಂಚಮ್ಮನಗುಡಿ ಹತ್ತಿರ, ಪೋತ್ನಾಳ, ಮಾನ್ವಿ ತಾಲೂಕು, ರಾಯಚೂರು ಜಿಲ್ಲೆ,
ಕರ್ನಾಟಕ 584123

ತಮ್ಮ ಘನತೆ ಮತ್ತು ನ್ಯಾಯವನ್ನು ಮರಳಿ
ಪಡೆಯುವುದಕ್ಕಾಗಿ ಸಂಘರ್ಷವನ್ನು ಮುಂದುವರೆಸಿರುವ
ಕರ್ನಾಟಕದ ಧೈರ್ಯಶಾಲಿ ದಲಿತ ಮಾದಿಗ ಮಹಿಳೆಯರಿಗೆ
ಈ ಕೃತಿ ಸಮರ್ಪಿತ

ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಜಾಗೃತ ಮಹಿಳಾ ಸಂಘಟನೆ
ಕೆಂಚಮ್ಮನಗುಡಿ ಹತ್ತಿರ,
ಪೋತ್ನಾಳ, ಮಾನ್ವಿ ತಾಲೂಕು,
ರಾಯಚೂರು ಜಿಲ್ಲೆ,
ಕರ್ನಾಟಕ–584123

*ಡಿಸೆಂಬರ್ 2015*

ಚಿತ್ರ ಸಂಗ್ರಹ: ನವನಿರ್ಮಾಣ ಟ್ರಸ್ಟ್ ಮತ್ತು ಸುಶೀಲಮ್ಮ
ಚಿತ್ರ ಸಂಶೋಧನೆ: ವಿಜಯ ಕುಮಾರ್. ಎಸ್ ಮತ್ತು ಇ. ಪ್ರೇಮದಾಸ ಪಿಂಟೋ
ಪರಿಕಲ್ಪನೆ, ಪಠ್ಯ ಮತ್ತು ಕಥೆ: ಡಾ. ಅಖಿಲಾ ವಾಸನ್, ಸತ್ಯಶ್ರೀ ಗೋಸ್ವಾಮಿ ಮತ್ತು ಇ. ಪ್ರೇಮದಾಸ ಪಿಂಟೋ
ಅನುವಾದ: ರಿಡಾಕ್ಟ್ ಕನ್ಸಲ್‌ಟೆಂಟ್ಸ್
ವಿನ್ಯಾಸ: ವಿಜಯ ಕುಮಾರ್. ಎಸ್
ನಿರ್ಮಾಣ: ಅರ್ಥ್‌ವರ್ಮ್ಸ್
ಮುದ್ರಣ ಮತ್ತು ಪ್ರಕಾಶನ ಬೆಂಬಲ: ಟ್ಯಾಂಬೋರಿನ್ ಟ್ರಸ್ಟ್

ಕೃತಜ್ಞತೆ: ಜಾಗೃತ ಮಹಿಳಾ ಸಂಘಟನೆಗೆ ಆಧಾರಸ್ಥಂಭವಾಗಿ ನಿಂತಿದ್ದ ಸಂಘಟನೆಗಳಿಗೆ ಮತ್ತು ಸಹ ಹೋರಾಟಗಾರರಿಗೆ ನಮ್ಮ ಹೃತ್ಪೂರ್ವಕವಾದ ಕೃತಜ್ಞತೆಗಳು– ಅಸೋಸಿಯೇಷನ್ ಫಾರ್ ಇಂಡಿಯಾಸ್ ಡೆವೆಲಪ್‌ಮೆಂಟ್, ಸಖೀ ಟ್ರಸ್ಟ್, ತಮಟೆ, ಟ್ಯಾಂಬೊರಿನ್ ಟ್ರಸ್ಟ್, ವಿವಿಧ ದಲಿತ ಸಂಘಟನೆಗಳು, ಕರ್ನಾಟಕ ಜನಾರೋಗ್ಯ ಚಳುವಳಿ, ನವ ಜೀವನ ಮಹಿಳಾ ಒಕ್ಕೂಟ, ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ, ವಿಮುಕ್ತಿ ಮತ್ತು ನೂರಾರು ಸ್ನೇಹಿತರು– ಹಿತೈಷಿಗಳು

## 1999-2000... ಮೂರನೇ ಸಹಸ್ರಮಾನದ ಹೊಸ್ತಿಲಲ್ಲಿ...



... ಆರಂಭ ಬಹಳ ಕಠಿಣವಾಗಿತ್ತು. ಹಸಿವು, ಕ್ಷುದ್ಬಾಧೆಗಳ ನರಳಾಟಗಳಲ್ಲಿ ದಲಿತ ಮಾದಿಗ ಮಹಿಳೆಯರ ಬದುಕು ಮುಳುಗಿ ಹೋಗಿತ್ತು. ಅವರನ್ನು ಜೀತಗಾರಿಕೆಗೆ ದೂಡಲಾಗಿತ್ತು. ಮೈಮುರಿಯುವಂತೆ ಕೆಲಸ ಮಾಡಿ ಹೊಟ್ಟೆಗೆ ಹಿಟ್ಟು ಹೊಂದಿಸಿಕೊಳ್ಳುವ ದಾರುಣ ಸ್ಥಿತಿ ಅವರದ್ದಾಗಿತ್ತು. ಕೆಲವೊಮ್ಮೆ ದಿನವಿಡೀ ಬೆವರು ಹರಿಸಿ ದುಡಿದರೂ ಮಾಡಿದ ಕೆಲಸಕ್ಕೆ ಕೂಲಿಯನ್ನೂ ಕೊಡುತ್ತಿರಲಿಲ್ಲ. ಹದಿಹರೆಯದ ಪುಟ್ಟ ಹೆಣ್ಣುಮಕ್ಕಳು ಹಸೆಮಣೆ ಏರಿ ಬಾಲ್ಯ, ತಾರುಣ್ಯಗಳನ್ನು ಆನಂದವಾಗಿ ಅನುಭವಿಸದೇ ತಾಯಿಯರಾಗಿಬಿಡುತ್ತಿದ್ದರು. ಈ ಹೆಣ್ಣುಮಕ್ಕಳು ಮನೆಯ ಒಳಗೂ, ಹೊರಗೂ ಬೀಳುತ್ತಿದ್ದ ಹೊಡೆತಗಳಿಗೆ ಮೈಯೊಡ್ಡಬೇಕಿತ್ತು. ಜಲಮೂಲ, ಬಾವಿ, ಕೆರೆಕಟ್ಟೆಗಳಂತಹ ಸಾಮಾನ್ಯ ಸಾರ್ವಜನಿಕ ಸ್ಥಳಗಳಿಂದ ಅವರನ್ನು ದೂರ ದೂಡಲಾಗುತ್ತಿತ್ತು. ಪಂಚಾಯತಿ, ಆಸ್ಪತ್ರೆಗಳಂತಹ ಸಾರ್ವಜನಿಕ ಸ್ಥಳಗಳಿಗೂ ಅವರಿಗೆ ಪ್ರವೇಶವಿರುತ್ತಿರಲಿಲ್ಲ. ಭೂಮಾಲಿಕರ ಆಜ್ಞೆಗಳನ್ನು ತಲೆಬಗ್ಗಿ ಪಾಲಿಸದಿದ್ದರೆ ಅವರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಲಾಗುತ್ತಿತ್ತು. ಅವರ ಮಾತುಗಳಲ್ಲೇ ಹೇಳುವುದಾದರೆ, "ನಮ್ಮ" ಹುಡುಗ, ಹುಡುಗಿಯರು "ಅವರ" ಹುಡುಗ ಹುಡುಗಿಯರನ್ನು ಪ್ರೀತಿಸಿದರೆ ನಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದರು, ಅತ್ಯಾಚಾರ ಮಾಡುತ್ತಿದ್ದರು. ಅಷ್ಟೇ ಏಕೆ, ನಮ್ಮನ್ನು ಬೆತ್ತಲೆಗೊಳಿಸಿ ಬೀದಿಯಲ್ಲಿ ಮೆರವಣಿಗೆ ಮಾಡಲಾಗುತ್ತಿತ್ತು. ಹೀಗೆ, ಪ್ರಪಂಚ ಮೂರನೇ ಸಹಸ್ರಮಾನಕ್ಕೆ ಹೊರಳುತ್ತಿದ್ದಾಗ ದಲಿತ ಮಾದಿಗ ಮಹಿಳೆಯರ ಮೇಲಿನ ದೌರ್ಜನ್ಯ, ದಮನ, ದಬ್ಬಾಳಿಕೆ, ಶೋಷಣೆಗಳಿಗೆ ಕೊನೆಮೊದಲಿರಲಿಲ್ಲ...

## ಘನತೆ ಮತ್ತು ನ್ಯಾಯವನ್ನು ಮರಳಿ ಪಡೆಯುತ್ತಾ...

ಸೆಪ್ಟೆಂಬರ್ 2001...ಮತ್ತೊಬ್ಬ ದಲಿತ ಮಹಿಳೆ ಬರ್ಬರವಾಗಿ ಅತ್ಯಾಚಾರಕ್ಕೊಳಗಾದಳು! ಬಳ್ಳಾರಿ ಜಿಲ್ಲೆಯ ವಣೇನೂರು ಹಳ್ಳಿಯ ಯರ್ರಮ್ಮ ಎಂಬ ಮಹಿಳೆಯನ್ನು ಬೆತ್ತಲೆಗೊಳಿಸಿ ಒಂದು ಕಿ.ಮೀ.ಗೂ ಹೆಚ್ಚು ದೂರ ಊರಿನ ಬೀದಿಯಲ್ಲಿ ಮೆರವಣಿಗೆ ಮಾಡಲಾಯಿತು; ನಂತರ ಆಕೆಯನ್ನು ಊರಿನ ಪಂಚಾಯತಿಯ ಮುಂದಿದ್ದ ಧ್ವಜಕಂಬಕ್ಕೆ ಕಟ್ಟಿಹಾಕಿ ಮೇಲ್ಜಾತಿಯ ಪುರುಷರು, ಮಹಿಳೆಯರು ಪ್ರಜ್ಞೆ ತಪ್ಪುವ ತನಕ ಮನಸೋಇಚ್ಛೆ ಹೊಡೆದರು, ಒದ್ದರು. ಆಕೆಯ ಮೇಲಿದ್ದ ಆರೋಪ ಏನೆಂದರೆ, ದಲಿತ ಹುಡುಗನೊಬ್ಬ ಮೇಲ್ಜಾತಿಯ ಹುಡುಗಿಯೊಂದಿಗೆ ಓಡಿಹೋಗುವುದಕ್ಕೆ ನೆರವಾಗಿದ್ದಳು ಎಂಬುದು..

ಜಾಗೃತ ಮಹಿಳಾ ಸಂಘಟನೆ (ಜೆ.ಎಂ.ಎಸ್) ಆಗ ತಾನೆ ಮೈದಳೆಯುತ್ತಿದ್ದ ಆ ಸಂದರ್ಭದಲ್ಲಿ ನಡೆದ ಈ ಹೃದಯವಿದ್ರಾವಕ ಘಟನೆ ಮಾಯದ ಗಾಯಗಳ ಮೇಲೆ ಬರೆ ಎಳೆದಂತಾಗಿತ್ತು. ಮನೆಯ ಒಳಗೂ, ಹೊರಗೂ ಕಳೆದುಹೋಗಿರುವ ತಮ್ಮ ಘನತೆಯನ್ನು ಮರಳಿ ಪಡೆಯುವುದಕ್ಕಾಗಿ ದಲಿತ ಮಾದಿಗ ಮಹಿಳೆಯರು ಸೆಟೆದು ನಿಲ್ಲುವುದಕ್ಕೂ ಈ ಘಟನೆ ಪ್ರೇರಣೆಯಾಯಿತು!

ಚಾರಿತ್ರಿಕವಾಗಿ ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದ ರಾಯಚೂರು ಊಳಿಗಮಾನ್ಯತೆಯ ದಟ್ಟ ಛಾಯೆಯನ್ನು ಹೊಂದಿರುವ ಜಿಲ್ಲೆ. ಜಾತಿ–ವರ್ಗ–ಪುರುಷಾಧಿಪತ್ಯಗಳ ಮಿಶ್ರಣವಿರುವ ಸಮಾಜದಲ್ಲಿ ದಲಿತ ಮಹಿಳೆಯ ಗೌರವಯುತ ಬದುಕಿನ ಮೇಲೆ ಮನೆಯ ಒಳಗೂ, ಹೊರಗೂ ಹೇಗೆ ಆಕ್ರಮಣ, ಹಿಂಸೆಗಳು ಅವ್ಯಾಹತವಾಗಿ ನಡೆಯುತ್ತದೆ ಎಂಬುದಕ್ಕೆ ರಾಯಚೂರು ಉತ್ತಮ ಉದಾಹರಣೆ. ದಕ್ಷಿಣ ಪ್ರಸ್ಥಭೂಮಿಯ ಬರಗಾಲ ಪೀಡಿತ ಜಿಲ್ಲೆಯಾದ ರಾಯಚೂರು 'ಭತ್ತದ ಕಣಜ' ಎಂಬ ಖ್ಯಾತಿಗೂ ಪಾತ್ರವಾಗಿದೆ. ದಲಿತ–ಮಾದಿಗರಂತಹ ರಾಜ್ಯದ ಅತ್ಯಂತ ಹಿಂದುಳಿದ ಮತ್ತು ತುಳಿತಕ್ಕೊಳಗಾದ ತಳಸಮುದಾಯಗಳಿಗೂ ಇದು ತವರುನಾಡು. ಸಮಾಜ ಸುಧಾರಕ ಬಸವೇಶ್ವರರು ಸಮಾನತೆ ಮತ್ತು ಸಾಮಾಜಿಕ ನ್ಯಾಯಗಳ ಬುನಾದಿಯ ಮೇಲೆ ಪ್ರತಿಷ್ಠಾಪಿಸಿದ ಬಸವಧರ್ಮದ ಅನುಯಾಯಿಗಳೆಂದು ಹೇಳಿಕೊಳ್ಳುವ ಸಮುದಾಯದ ಭೂಮಾಲಿಕರೇ ಇಲ್ಲಿ ಅಸ್ಪೃಶ್ಯತೆಯಂತಹ ಕರಾಳ ಸ್ವರೂಪಗಳೊಂದಿಗೆ ಆಳವಾಗಿ ಬೇರೂರಿರುವ ಕ್ರೂರ ಜಾತಿವ್ಯವಸ್ಥೆ ಮತ್ತು ಪುರುಷಾಧಿಪತ್ಯ ಮೌಲ್ಯಗಳ ಆಧಿಪತ್ಯವನ್ನು ನಿರ್ದಯವಾಗಿ ಹೇರುತ್ತಾ ಬಂದಿದ್ದಾರೆ.

ಯಾವಾಗ ದಮನಿತ ದಲಿತರು ತಮ್ಮ ಮೇಲಾಗುತ್ತಿರುವ ಶೋಷಣೆಗೆ ಪ್ರತಿರೋಧ ಒಡ್ಡಲಾರಂಭಿಸಿದರೋ, ಯಾವಾಗ ಅವರು ಜಾತಿ ವ್ಯವಸ್ಥೆಯ ವಿಕೃತ ಕಟ್ಟಳೆಗಳನ್ನು ಮೆಟ್ಟಿ ನಿಲ್ಲುವುದಕ್ಕೆ ಧೈರ್ಯ ತೋರಲಾರಂಭಿಸಿದರೋ ಆಗ ಅವರ ಮೇಲೆ ಅಮಾನವೀಯವಾದ ದೌರ್ಜನ್ಯಗಳನ್ನು ಹರಿಬಿಡಲಾಯಿತು; ದಲಿತ ಮಹಿಳೆಯರನ್ನು ಬೆತ್ತಲೆಗೊಳಿಸಿ ಬೀದಿಯಲ್ಲಿ ಮೆರವಣಿಗೆ ಮಾಡಲಾಯಿತು; ಇಡೀ ಸಮುದಾಯದ ಮೇಲೆ ಸಾಮಾಜಿಕ ಮತ್ತು ಆರ್ಥಿಕ ದಿಗ್ಬಂಧನವನ್ನು ಹೇರಿ ದಮನಿತರ ಪ್ರತಿರೋಧದ ದನಿಯನ್ನು ಹೊಸಕಿಹಾಕುವುದಕ್ಕೆ ಪ್ರಯತ್ನಿಸಲಾಯಿತು. ವಾಸ್ತವದಲ್ಲಿ, ಈ ಕ್ರೂರ ಜಾತಿಯಾಧಾರಿತ ದಮನವೇ ಅದರ ವಿರುದ್ಧದ ಪ್ರತಿರೋಧವನ್ನು ಮತ್ತಷ್ಟು ಗಟ್ಟಿಗೊಳಿಸಿತು. 80ರ ದಶಕದಲ್ಲಿ ಪ್ರೊ. ಬಿ. ಕೃಷ್ಣಪ್ಪನವರ ಸಾರಥ್ಯದಲ್ಲಿ ಜನ್ಮತಳೆದ ದಲಿತ ಸಂಘರ್ಷ ಸಮಿತಿಯ (ಡಿ.ಎಸ್.ಎಸ್) ನೇತೃತ್ವದಲ್ಲಿ ಇಡೀ ರಾಜ್ಯದಾದ್ಯಂತ ದಲಿತ ಹೋರಾಟದ ಬಿರುಗಾಳಿ ಬೀಸಲಾರಂಭಿಸಿದಾಗ ರಾಯಚೂರು ಜಿಲ್ಲೆ ಈ ಸ್ವಾಭಿಮಾನಿ ವಿಮೋಚನಾ ಚಳುವಳಿಗೆ ಭದ್ರ ನೆಲೆಯೊದಗಿಸಿತ್ತು. ಡಿ.ಎಸ್.ಎಸ್ ನೇತೃತ್ವದಲ್ಲಿ ಇಲ್ಲಿನ ದಮನಿತ ದಲಿತ ಸಮುದಾಯ ದೊಡ್ಡ ಮಟ್ಟದಲ್ಲಿ ಒಗ್ಗಟ್ಟಾಗಿ ವಿಮೋಚನಾ ಆಂದೋಲನದಲ್ಲಿ ಕ್ರಿಯಾಶೀಲವಾಗಿ ಅಣಿನೆರೆಯಿತು. ಈ ವೀರೋಚಿತ ಹೋರಾಟಗಳು ದಮನಿತ ದಲಿತ ಸಮುದಾಯದಲ್ಲಿ ಸ್ವಾಭಿಮಾನದ ಕಿಚ್ಚು ಹೊತ್ತಿಸಿ ಹೊಸ ಚೈತನ್ಯವನ್ನು ತುಂಬಿದವು; ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವುದಕ್ಕೆ, ಶೋಷಣೆಯಿಂದ ವಿಮೋಚನೆಗೊಳ್ಳುವುದಕ್ಕೆ ದಲಿತ ಸಮೂಹವನ್ನು ಹುರಿದುಂಬಿಸಿದವು.

ಅದರೆ. 2000ನೇ ಸಾಲಿನ ಹೊತ್ತಿಗೆ ಡಿ.ಎಸ್.ಎಸ್ ಹಲವು ಗುಂಪುಗಳಾಗಿ ಒಡೆದು ಛಿದ್ರವಾಗಿ ಇಡೀ ಹೋರಾಟವೇ ಕಾವು ಕಳೆದುಕೊಂಡಿತಲ್ಲದೇ ಯಾವ ಗುಂಪಿನಲ್ಲೂ ಒಬ್ಬ ದಲಿತ ಮಹಿಳೆಯೂ ಇಲ್ಲದ ಪರಿಸ್ಥಿತಿ ನಿರ್ಮಾಣವಾಯಿತು. ದಲಿತ ಮಹಿಳೆಯರ ಮೇಲೆ ಮೇಲ್ಜಾತಿಯ ಜನರು ಅತ್ಯಾಚಾರ ಮಾಡಿದಾಗ, ಲೈಂಗಿಕ ದೌರ್ಜನ್ಯಗಳನ್ನು ನಡೆಸಿದಾಗ ಅಂತಹ ಘಟನೆಗಳನ್ನು ದಲಿತ ಅಸ್ಮಿತತೆಯ ಸುತ್ತ ಜನಸಮೂಹವನ್ನು ಒಗ್ಗೂಡಿಸಿ ಅಣಿನೆರೆಸುವುದಕ್ಕಷ್ಟೇ ಸಾಂಕೇತಿಕವಾಗಿ ಬಳಸಿಕೊಳ್ಳಲಾಯಿತೇ ಹೊರತು ಅಂತಹ ಬಿಡಿಬಿಡಿ ಹೋರಾಟಗಳು ಒಂದು ಆಂದೋಲನವಾಗಿ ಮರುಹುಟ್ಟು ಪಡೆಯಲಿಲ್ಲ; ಜೊತೆಗೆ, ದಲಿತ ಸಮುದಾಯದೊಳಗೇ, ಮನೆಮನೆಗಳಲ್ಲಿ ದಲಿತ ಮಹಿಳೆಯರ ಮೇಲೆ ನಡೆಯುತ್ತಿದ್ದ ಲಿಂಗಾಧಾರಿತ ತಾರತಮ್ಯ ಮತ್ತು ಹಿಂಸೆಗಳನ್ನು ಈ ಹೋರಾಟಗಳು ಗುರುತಿಸಲೇ ಇಲ್ಲ. ಜಾತಿ, ಪುರುಷಾಧಿಪತ್ಯ ಮತ್ತು ವರ್ಗ – ಈ ಮೂರು ದಮನಕಾರಿ ಸಾಮಾಜಿಕ ಸಂರಚನೆಗಳ ಮೂಲಕ ಈ ಮಹಿಳೆಯರ ಮೇಲೆ ಕ್ರಮವಾಗಿ ದಲಿತ, ಮಹಿಳೆ ಮತ್ತು ಕೃಷಿಕೂಲಿ ಎಂಬ ಮೂರು ಆಯಾಮಗಳಲ್ಲಿ ಅಂದಿನಿಂದಲೂ ನಡೆಯುತ್ತಿರುವ ಕ್ರೂರ ದಮನ, ದೌರ್ಜನ್ಯ, ತಾರತಮ್ಯಗಳು ಇಂದಿಗೂ ಅನಿರ್ಬಂಧಿತವಾಗಿ ಮುಂದುವರೆದಿವೆ.

ಪ್ರಪಂಚ ಹೊಸ ಸಹಸ್ರಮಾನಕ್ಕೆ ಹೊರಳುತ್ತಿದ್ದ 1999ರ ಸಮಯದಲ್ಲಿ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಪೋತ್ನಾಳ ಎಂಬ ಪುಟ್ಟ ಹಳ್ಳಿಯನ್ನು ಕೇಂದ್ರವನ್ನಾಗಿಟ್ಟುಕೊಂಡು ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಸಣ್ಣ ಸಾಮಾಜಿಕ ಪ್ರಯೋಗವೊಂದು ಆರಂಭವಾಯಿತು. ಜಾತಿ, ವರ್ಗ ಮತ್ತು ಲಿಂಗಗಳ ಆಧಾರದಲ್ಲಿ ನಡೆಯುತ್ತಿದ್ದ ಶೋಷಣೆ, ದೌರ್ಜನ್ಯ, ದಬ್ಬಾಳಿಕೆಗಳ ವಿರುದ್ಧ ಪ್ರತಿರೋಧ ಒಡ್ಡುವುದಕ್ಕಾಗಿ ತಳಮಟ್ಟದಲ್ಲಿ ದಮನಿತ ದಲಿತ ಮಹಿಳೆಯರ ದನಿಯಾಗಿ ಜಾಗೃತ ಮಹಿಳಾ ಸಂಘಟನೆ ಜನ್ಮಪಡೆಯಿತು. ಜಾಗೃತ ಮಹಿಳಾ ಸಂಘಟನೆಯ ಕಥೆ ದಲಿತ ಮಹಿಳೆಯರ ಮೇಲಿನ ಶೋಷಣೆ, ದಬ್ಬಾಳಿಕೆ, ದೌರ್ಜನ್ಯಗಳ ವಿರುದ್ಧ ನಡೆದ ಸ್ವಾಭಿಮಾನಿ ಆಂದೋಲನದ ಸಾಮಾಜಿಕ ಪ್ರಯೋಗದ ಕಥೆಯಾಗಿದೆ. ಈ ಪ್ರಕ್ರಿಯೆಗೆ ಮಾರ್ಗದರ್ಶನ ಮಾಡಿದ್ದು "ಹಕ್ಕುಗಳಿಗಾಗಿ ಸಂಘರ್ಷ" ಮತ್ತು "ಘನತೆಗಾಗಿ ನವನಿರ್ಮಾಣ" ಎಂಬ ದ್ವಿಮುಖ ತತ್ವಗಳ ವ್ಯೂಹತಂತ್ರ. ಸಂಘಟನೆಯ ಅಡಿಯಲ್ಲಿ ದಲಿತ ಮಾದಿಗ ಮಹಿಳೆಯರು ಸಾಮಾಜಿಕವಾಗಿ ಒಗ್ಗೂಡುವ ಮೂಲಕ, ಸಾಮೂಹಿಕವಾಗಿ ಅಣಿನೆರೆಯುವ ಮೂಲಕ, ದಮನಕಾರಿ ಸಾಮಾಜಿಕ ಸಂರಚನೆಗಳಿಗೆ ಸವಾಲೊಡ್ಡುವ ಮೂಲಕ, ಸಂಘಟಿತ ಶಕ್ತಿಯನ್ನು ಬಳಸಿಕೊಂಡು ಜಾತಿಯಾಧಾರಿತ, ಲಿಂಗಾಧಾರಿತ ಹಿಂಸೆಗೆ ಮುಖಾಮುಖಿಯಾಗಿ ಪ್ರತಿರೋಧ ಒಡ್ಡುತ್ತಾ ನ್ಯಾಯ, ಸಮಾನತೆ ಮತ್ತು ಘನತೆಗಾಗಿ ದೃಢ ಹೋರಾಟವನ್ನು ನಡೆಸಿದರು.

"ಅಸಂಘಟಿತ ಮಾದಿಗ ಮಹಿಳಾ ಕೃಷಿಕೂಲಿ ಕಾರ್ಮಿಕ"ರಾಗಿದ್ದ ಈ ಮಹಿಳೆಯರು "ಜಾಗೃತ ಮಹಿಳಾ ಸಂಘಟನೆ"ಯಾಗಿ ವಿಕಾಸ ಹೊಂದಿದ ಈ ಹದಿನಾರು ವರ್ಷಗಳ ಸಂಘರ್ಷದ ಪಯಣವನ್ನು ನಿಜಕ್ಕೂ ಒಂದು ಸಾಮಾಜಿಕ ಪ್ರಯೋಗ ಎಂದೇ ಬಣ್ಣಿಸಬಹುದಾಗಿದೆ: ಸಮುದಾಯವೊಂದು ತನ್ನದೇ ಮಾಲೀಕತ್ವ, ನಿಯಂತ್ರಣಗಳನ್ನು ಹೆಚ್ಚಿಸಿಕೊಂಡು ದೃಢವಾಗಿ ಮುನ್ನಡೆ ಸಾಧಿಸಿದ ಪ್ರಯೋಗವದು.

ಜಾಗೃತ ಮಹಿಳಾ ಸಂಘಟನೆಯ ಕೆಲವು ಚಾರಿತ್ರಿಕ ಘಟನಾವಳಿಗಳ ಚಿತ್ರಣವನ್ನು ಹಿಡಿದಿಡುವ ಒಂದು ಸಣ್ಣ ಪ್ರಯತ್ನವೇ ಈ ಚಿತ್ರಪುಸ್ತಕ. ಇದರಲ್ಲಿ ಕೃಷಿಕೂಲಿ ಕಾರ್ಮಿಕರಾದ ದಲಿತ ಮಾದಿಗ ಮಹಿಳೆಯರ ಬದುಕು, ಅವರು ಜಾಗೃತ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ನಡೆಸಿದ ಚಾರಿತ್ರಿಕ ಹೋರಾಟಗಳು, ಒಂದೂವರೆ ದಶಕದ ಹಿಂದೆ ಪ್ರಾರಂಭವಾಗಿ ಇಂದಿಗೂ ಮುಂದುವರೆಯುತ್ತಿರುವ ಸಂಘರ್ಷ ಮತ್ತು ನವನಿರ್ಮಾಣದೆಡೆಗಿನ ಅವರ ದಣಿವರಿಯದ ಪಯಣ ಮುಂತಾದ ಚಾರಿತ್ರಿಕ ಕ್ಷಣಗಳನ್ನು ಈ ಪುಸ್ತಕದಲ್ಲಿ ದಾಖಲಿಸುವ ಪ್ರಯತ್ನ ಮಾಡಲಾಗಿದೆ.

ಜೆ.ಎಂ.ಎಸ್.ನ ಚರಿತ್ರೆ ಎಂದರೆ ನಿಸ್ಸಹಾಯಕ, ವಿನಮ್ರ ಬಲಿಪಶುಗಳಾಗಿದ್ದ ದಲಿತ ಮಾದಿಗ ಮಹಿಳೆಯರು ತಮ್ಮ ಬದುಕಿನ ಚುಕ್ಕಾಣಿಯನ್ನು ತಾವೇ ಹಿಡಿದು ಕ್ರಿಯಾಶೀಲ ಪ್ರಜೆಗಳಾಗಿ ಹೊರಹೊಮ್ಮಿದ ಪಯಣ. ಸ್ವಾಭಿಮಾನ, ಸ್ಥಾನಮಾನ ಮತ್ತು ಹಕ್ಕುಗಳಿಗಾಗಿ ನಡೆಸಿದ ಚಾರಿತ್ರಿಕ ಹೋರಾಟಗಳ ಮತ್ತು ಅಸಂಖ್ಯ ಜಾಗೃತಿ ಅಭಿಯಾನಗಳ ಮೂಲಕವೇ ಈ ದಮನಿತ ಸಮುದಾಯ ಒಂದು ಸಮಷ್ಟಿ ಶಕ್ತಿಯಾಗಿ ಹೊರಹೊಮ್ಮಿದ್ದು. ದಲಿತ ಮಹಿಳೆಯರು ತಮ್ಮ ಮನೆಯ ನಾಲ್ಕು ಗೋಡೆಗಳಿಂದ ಹೊರಬರುವುದಕ್ಕೆ ಮಾತ್ರವಲ್ಲದೇ, ತಮ್ಮ ಹಳ್ಳಿಯಿಂದಲೂ ಹೊರಬಂದು ರಾಯಚೂರು ಜಿಲ್ಲೆಯ ವಿವಿಧ ಸ್ಥಳಗಳಿಗೆ, ಅದರಾಚೆಯ ಪ್ರದೇಶಗಳಿಗೆ ಹೋಗಿ ಎದುರಾದ ಅಡ್ಡಿ ಅಡಚಣೆಗಳನ್ನು ಮೀರಿ ಹೊಸ ಹೊಸ ಮಾರ್ಗಗಳನ್ನು ಕಂಡುಕೊಂಡು ಮುನ್ನಾಗುವುದಕ್ಕೆ ಅವರಲ್ಲಿ ಬಲ ತುಂಬಿದ್ದು ಈ ಹೋರಾಟವೇ. ತಮ್ಮದೇ ಸಮುದಾಯದೊಳಗಿನ ಹಾಗೂ ಸಮುದಾಯದಾಚೆಗೆ ಜಾತಿಪೀಡಿತ ಸಮಾಜದೊಳಗಿನ ಎಲ್ಲಾ ಸ್ವರೂಪಗಳ ದಮನವನ್ನು, ಶೋಷಕ ಅಧಿಕಾರ ಸಂಬಂಧಗಳನ್ನು ಪ್ರಶ್ನಿಸುವುದಕ್ಕೆ ಅವರಲ್ಲಿ ಸ್ಫೂರ್ತಿ ತುಂಬಿದ್ದೂ ಈ ಸಂಘರ್ಷವೆ. ವಾಸ್ತವದಲ್ಲಿ, ಹೊಸ ಜ್ಞಾನವನ್ನು ಪಡೆಯುವುದಕ್ಕೆ, ಸಮಷ್ಟಿಯ ಶಕ್ತಿಯನ್ನು ಅನುಭವಿಸುವುದಕ್ಕೆ ಅವರಿಗೆಲ್ಲಾ ಬೀದಿಯೇ ಶಾಲೆಯಾಗಿತ್ತು. ಈ ಸಂಘರ್ಷದ ಪ್ರಕ್ರಿಯೆಯಲ್ಲಿಯೇ ಈ ದಮನಿತ ಸಮುದಾಯದಿಂದ ಅನೇಕ ಮಹಿಳಾ ನಾಯಕಿಯರು ಬೆಳೆದು ಬಂದರು; ಹೋರಾಟದ ಚುಕ್ಕಾಣಿ ಹಿಡಿಯುವುದಕ್ಕೆ ನಿರ್ಧರಿಸಿ ಮುಂಚೂಣಿಯಲ್ಲಿ ನಿಂತರು. ದಲಿತ ಸಮುದಾರ್ಯದ ಮಕ್ಕಳಿಗಾಗಿ ಪ್ರಾರಂಭವಾದ ಚಿಲಿಪಿಲಿ ಶಾಲೆ ಇಡೀ ಜಿಲ್ಲೆಯ ಅತ್ಯುತ್ತಮ ಬಾಲಕಾರ್ಮಿಕ ವಸತಿಶಾಲೆಗಳಲ್ಲೊಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಜನ ಎಲ್ಲಾ ರೀತಿಯ ಹಿಂಸೆ, ದೌರ್ಜನ್ಯಗಳಿಂದ ಗುಣಮುಖರಾದರಲ್ಲದೇ, ತಮ್ಮ ಗಿಡಮೂಲಿಕೆಯ ಔಷಧಗಳಿಂದ ಕನಿಷ್ಠ 5000 ಪುರುಷರು, ಮಹಿಳೆಯರನ್ನೂ ಗುಣಪಡಿಸಿದರು; ಈ ಗುಣಮುಖ ಸ್ಪರ್ಶವೇ ಅವರಿಗೆ ತಮ್ಮ ಊರಿನಾಚೆಗೆ ವಿವಿಧ ಪ್ರದೇಶಗಳಲ್ಲಿ ಮನ್ನಣೆಯನ್ನು ತಂದುಕೊಟ್ಟಿತು. ಅವರ ಹೋರಾಟದ ಪಯಣವನ್ನು ಗುರುತಿಸಿ ನೀಡಲಾದ ಪ್ರಶಸ್ತಿಗಳಲ್ಲಿ ಬೇವಿನಗೊಬ್ಬರದ ಸಾಮುದಾಯಿಕ ಪ್ರಯತ್ನಕ್ಕಾಗಿ ಸಿಟಿ ಗ್ರೂಪ್ ರಾಷ್ಟ್ರೀಯ ಪ್ರಶಸ್ತಿ (2006), ಕರ್ನಾಟಕ ಸರ್ಕಾರ ಮತ್ತು ರಾಷ್ಟ್ರೀಯ ಮಹಿಳಾ ಆಯೋಗದಿಂದ ನೀಡಲಾದ ನಾಯಕತ್ವ ಪುರಸ್ಕಾರ (2013) ಗಳು ಪ್ರಮುಖವಾಗಿವೆ.






ಸಾರ್ವಜನಿಕ ವೇದಿಕೆಯನ್ನು ಬಳಸಿಕೊಳ್ಳದೇ ಜಾತಿಗೋಡೆಗಳನ್ನು ಪ್ರಶ್ನಿಸುವುದು ಸಾಧ್ಯವಿಲ್ಲ;
ಅಂಬೇಡ್ಕರ್‌ಗಿಂತ ಉತ್ತಮವಾದ ಸಾರ್ವಜನಿಕ ವೇದಿಕೆ ಉಂಟೆ?

ಸತ್ತ ಪ್ರಾಣಿಗಳನ್ನು ವಿಲೇವಾರಿ ಮಾಡುವ, ದನಗಳ ಚರ್ಮ ಸುಲಿಯುವ, ಮೇಲ್ಜಾತಿಯ ಜನರು ಬಳಸುವ ಚಪ್ಪಲಿಗಳಂತಹ ಚರ್ಮದ ವಸ್ತುಗಳನ್ನು ತಯಾರಿಸುವ, ಮೇಲ್ಜಾತಿಯ ಕುಟುಂಬಗಳಲ್ಲಿ ಸಾವು ಸಂಭವಿಸಿದಾಗ, ಸಂಭ್ರಮದ ಆಚರಣೆಗಳಿದ್ದಾಗ ಅಲ್ಲಿ ಹಲಗೆ ಹೊಡೆಯುವ ಇತ್ಯಾದಿ ಅಪವಿತ್ರವೆಂದು ಪರಿಗಣಿಸಲಾಗಿರುವ ಕೆಲಸಗಳನ್ನು ದಮನಕಾರಿ ಸಾಮಾಜಿಕ ವ್ಯವಸ್ಥೆಯ ಮೂಲಕ ಮಾದಿಗ ಸಮುದಾಯದ ಮೇಲೆ ಹೇರಿ ಆ ಸಮುದಾಯವನ್ನು ತುಚ್ಛೀಕರಿಸಲಾಗಿದೆ. ದಲಿತ ಚಳುವಳಿಯ ಮೂಲಕ ಮಾದಿಗ ಸಮುದಾಯದ ಪುರುಷರ ಸ್ಥಿತಿಗತಿ ನಿಧಾನವಾಗಿ ಸ್ವಲ್ಪ ಬದಲಾವಣೆಯಾಗಿತ್ತಾದರೂ ಅದೇ ಸಮುದಾಯದ ಮಹಿಳೆಯರ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಆಗಿರಲಿಲ್ಲ. ಸಾಮುದಾಯಿಕ ಆಚರಣೆಗಳಾದ ಅಂಬೇಡ್ಕರ್ ಜಯಂತಿಯಲ್ಲಿ ಪಾಲ್ಗೊಳ್ಳುವುದು, ಹಾಡುವುದು, ಕುಣಿಯುವುದು, ಪಾರಂಪರಿಕ ವಾದ್ಯಗಳನ್ನು ಬಾರಿಸುವುದು, 'ಬ್ಯಾಸಿಗೆ ಹಬ್ಬ' ಎಂದು ಪ್ರಸಿದ್ಧವಾಗಿರುವ ಆಚರಣೆಯಲ್ಲಿ ಸಂಭ್ರಮದಿಂದ ಒಟ್ಟಿಗೆ ಸೇರಿ ಪಾಲ್ಗೊಳ್ಳುವುದು ಮುಂತಾದ ಚಟುವಟಿಕೆಗಳೇ ಈ ದಮನಿತ ದಲಿತ ಮಹಿಳಾ ಸಮುದಾಯವನ್ನು ಅಣಿನೆರೆಸಿ ಒಗ್ಗೂಡಿಸುವಲ್ಲಿ ಕೀಲಕ ಪಾತ್ರ ನಿರ್ವಹಿಸಿದವು.





ಪಾರಂಪರಿಕವಾಗಿ ದಲಿತ ಪುರುಷರು ತಮ್ಮದೇ ವಾದ್ಯಗಳನ್ನು ಬಾರಿಸುತ್ತಿರಬೇಕಾದರೆ, ದಲಿತ ಮಾದಿಗ ಮಹಿಳೆಯರು ಕ್ರಮೇಣ ಮುಂಚೂಣಿಗೆ ಬಂದು ನಾಯಕತ್ವದ ಚುಕ್ಕಾಣಿಯನ್ನು ವಹಿಸಿಕೊಂಡರು.

ಜಾತಿಯಾಧಾರಿತ, ಲಿಂಗಾಧಾರಿತ ಹಿಂಸೆಯನ್ನು ಪ್ರತಿರೋಧಿಸುವ ಮೂಲ ಧ್ಯೇಯವೇ ಜಾಗೃತ ಮಹಿಳಾ ಸಂಘಟನೆಯ ಹುಟ್ಟಿಗೆ ಪ್ರೇರಣೆಯಾದ ಪ್ರಧಾನ ಅಂಶ. ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವ ಘನತೆಗಾಗಿ ಬದ್ಧತೆ ಎಂಬ ಮೂಲತತ್ವಗಳೇ ಈ ಸಂಘಟನೆಯ ಮೂಲಸಾರವನ್ನು ರೂಪಿಸಿವೆ.

ಪಕ್ಕದ ಬಳ್ಳಾರಿ ಜಿಲ್ಲೆಯ ವಣೇನೂರು ಎಂಬ ಹಳ್ಳಿಯಲ್ಲಿ 2001ರ ಸೆಪ್ಟೆಂಬರ್‌ನಲ್ಲಿ ಯರ‍್ರಮ್ಮ ಎಂಬ ದಲಿತ ಮಾದಿಗ ಮಹಿಳೆಯನ್ನು ಥಳಿಸಿ, ಬೆತ್ತಲೆ ಮೆರವಣಿಗೆ ಮಾಡಿದ ಘಟನೆಯನ್ನು ವಿರೋಧಿಸಿ ಜೆ.ಎಂ.ಎಸ್ ಚಾರಿತ್ರಿಕ ಪೋತ್ನಾಳ್ ಬಂದ್ ಮತ್ತು ರಸ್ತೆತಡೆ ಚಳುವಳಿಯನ್ನು ಸಂಘಟಿಸಿತು. ಈ ಚಾರಿತ್ರಿಕ ಸೌಹಾರ್ದ ಹೋರಾಟದಲ್ಲಿನ ಅಗಾಧ ಜನಶಕ್ತಿಯ ಪ್ರದರ್ಶನವು ದಲಿತ ಮಹಿಳೆಯರ ಮನಸ್ಸಿನಲ್ಲಿ ಸಮಷ್ಟಿಶಕ್ತಿಯ ಪ್ರಜ್ಞೆಯನ್ನು ಆಳವಾಗಿ ನೆಟ್ಟಿತಲ್ಲದೇ ಜೆ.ಎಂ.ಎಸ್‌ಗೆ ಒಂದು ಅಸ್ಮಿತೆಯನ್ನೂ ಕೊಟ್ಟಿತು; ಸಂಘಟನೆಯ ಭವಿತವ್ಯದ ಹಾದಿಯನ್ನೂ ದರ್ಶಿಸಿತು.

ದಲಿತ ಮಹಿಳೆಯರ ಮೇಲಿನ ಎಲ್ಲಾ ಸ್ವರೂಪದ ಹಿಂಸೆ ಮತ್ತು ತಾರತಮ್ಯಗಳ (ಕೌಟುಂಬಿಕ ಮತ್ತು ಜಾತಿಯಾಧಾರಿತ ಎರಡೂ) ವಿರುದ್ಧ ಅವಿರತ ಹೋರಾಟಗಳು ಮುಂದುವರೆದವು; ಪರಿಣಾಮವಾಗಿ ರಾಯಚೂರಿನಲ್ಲಿ ದಲಿತ ಮಹಿಳೆಯರ ಸಮಸ್ಯೆಗಳ ಬಗ್ಗೆ ಸಾಮಾನ್ಯವಾಗಿ ಪ್ರತಿಕ್ರಿಯಾಶೂನ್ಯರಾಗಿರುತ್ತಿದ್ದ, ಸೋಮಾರಿಗಳಾಗಿರುತ್ತಿದ್ದ ಪೋಲೀಸರಿಗೆ ಮತ್ತು ಆಡಳಿತ ಯಂತ್ರಾಂಗಕ್ಕೆ ಬಿಸಿ ತಟ್ಟಿತು; ಈ ಹೋರಾಟಗಳೇ ಪೋಲೀಸರು, ಆಡಳಿತ ಯಂತ್ರಾಗ ದಲಿತರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಕಾರ್ಯಪ್ರವೃತ್ತರಾಗುವಂತೆ ಮಾಡಿದವು.






ಯರ್ರಮ್ಮಳನ್ನು ಬೆತ್ತಲೆಗೊಳಿಸಿ ಬೀದಿಯಲ್ಲಿ ಮೆರವಣಿಗೆ ಮಾಡಲಾಯಿತು... ಅವಳ ಬೆಂಬಲಕ್ಕೆ ಗಟ್ಟಿಯಾಗಿ ನಿಂತಿದ್ದರಿಂದ ಜಾತಿಯಾಧಾರಿತ ಹಿಂಸೆಗೆ ಸವಾಲೊಡ್ಡಿ ಪ್ರತಿರೋಧಿಸುವುಕ್ಕೂ ನಮಗೆ ಶಕ್ತಿ ಬಂದಿತು.

ಸಾಮಾಜಿಕ ನ್ಯಾಯಕ್ಕಾಗಿ ನಡೆದ ಬೃಹತ್ ಹೋರಾಟಗಳು, ಸೌಹಾರ್ದ ಚಟುವಟಿಕೆಗಳು ಜೆ.ಎಂ.ಎಸ್‌ಗೆ ಶಕ್ತಿತುಂಬಿ ಪ್ರೇರೇಪಿಸಿವೆ. 2001-2004ರ ನಡುವಿನ ಸುದೀರ್ಘ ಕಾಲದ ಬರಗಾಲದಲ್ಲಿ ಜೆ.ಎಂ.ಎಸ್ ಕೃಷಿಕಾರ್ಮಿಕರ ಹೋರಾಟಗಳನ್ನು ಕಟ್ಟಿಬೆಳೆಸಿ ಅವುಗಳನ್ನು ಎಲ್ಲಾ ತಳಸಮುದಾಯಗಳ ವಿಶಾಲ ಕಾರ್ಮಿಕ ಚಳುವಳಿಯನ್ನಾಗಿ ಮಾರ್ಪಡಿಸಿತು. ಕೊಯ್ಲು ಯಂತ್ರಗಳ ವಿರುದ್ಧ ನಡೆದ ವೀರೋಚಿತ ಹೋರಾಟವು ಈ ಸಮಯದಲ್ಲಿ ನಡೆದ ಪ್ರಮುಖ ಹೋರಾಟಗಳಲ್ಲಿ ಒಂದು. ಈ ಹೋರಾಟದ ಪರಿಣಾಮದಿಂದಾಗಿಯೇ 2004-05ರಲ್ಲಿ ಭತ್ತ ಕಟಾವು ಮಾಡುವ ಯಂತ್ರಗಳನ್ನು ರಾಯಚೂರು ಜಿಲ್ಲೆಯಲ್ಲಿ ಮೊಟ್ಟ ಮೊದಲ ಬಾರಿಗೆ ನಿಷೇಧಿಸಲೇಬೇಕಾದ ಅನಿವಾರ್ಯತೆಗೆ ಆಡಳಿತ ಯಂತ್ರಾಂಗ ಒಳಗಾಗಿತ್ತು. ದಲಿತ ಸಮುದಾಯದ ಮೇಲಿನ ದೌರ್ಜನ್ಯಗಳ ವಿರುದ್ಧ ದಲಿತ ಸಂಘಟನೆಗಳು ಪ್ರತಿರೋಧಿ ಹೋರಾಟಗಳನ್ನು ಕೈಗೆತ್ತಿಕೊಂಡಾಗ ಜೆ.ಎಂ.ಎಸ್ ಅಂತಹ ಹೋರಾಟಗಳಿಗೆ ಸಕ್ರಿಯ ಸೌಹಾರ್ದತೆ ವ್ಯಕ್ತಪಡಿಸುವ ಕಾರ್ಯಕ್ರಮಗಳನ್ನು ನಡೆಸಿತು. ಸಮಾಜದ ಅತ್ಯಂತ ತಳಸ್ತರದಲ್ಲಿರುವ ಮಾದಿಗ ಸಮುದಾಯಕ್ಕೆ ನ್ಯಾಯಬದ್ಧವಾದ ಮೀಸಲಾತಿ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕದಲ್ಲಿ (ಮಾದಿಗ ಮೀಸಲಾತಿ/ರಿಸರ್ವೇಷನ್ ಹೋರಾಟ ಸಮಿತಿಯ ನೇತೃತ್ವದಲ್ಲಿ) ನಡೆದ ಹೋರಾಟಗಳಿಗೂ ಜೆ.ಎಂ.ಎಸ್ ತನ್ನ ಸಕ್ರಿಯ ಬೆಂಬಲವನ್ನು ವ್ಯಕ್ತಪಡಿಸಿತು. ರಾಷ್ಟ್ರೀಯ ಪ್ರಜಾ ಚಳುವಳಿಗಳ ಒಕ್ಕೂಟ (ಎನ್.ಎ.ಪಿ.ಎಂ), ನರ್ಮದಾ ಬಚಾವೋ ಆಂದೋಲನ (ಎನ್.ಬಿ.ಎ), ಜನಾರೋಗ್ಯ ಚಳುವಳಿಗಳು ಹಾಗೂ ಇನ್ನಿತರ ಜನಪರ ಚಳುವಳಿಗಳನ್ನೂ ಬೆಂಬಲಿಸಿ ಅನೇಕ ಚಟುವಟಿಕೆಗಳನ್ನು ಅದು ಮುಂದುವರೆಸಿತು.





ಸಂದರ್ಭೋಚಿತ ಚಟುವಟಿಕೆಗಳ ಮೂಲಕ ಸಕಾಲದಲ್ಲಿ ನಮ್ಮ ಶಕ್ತಿ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳುತ್ತಲೇ ನಾವು ಒಂದು ಸಮಷ್ಟಿಯಾಗಿ ಒಗ್ಗೂಡಿ ಸಾಮಾಜಿಕ ಸಂರಚನೆಗಳಲ್ಲಿ ಗಟ್ಟಿಯಾಗಿ ಹೂತುಕೊಂಡಿರುವ ಶತಮಾನಗಳಷ್ಟು ಹಳೆಯದಾದ ತಾರತಮ್ಯ, ಹಿಂಸೆ ಮತ್ತು ದೌರ್ಜನ್ಯಗಳನ್ನು ಪ್ರಶ್ನಿಸುವುದಕ್ಕೆ ಮುಂದಾದೆವು.

ಮಹಿಳೆಯರಿಗೆ ಗರ್ಭಾವಸ್ಥೆ ಮತ್ತು ಹೆರಿಗೆಯ ಸಮಯದಲ್ಲಿ ಆತ್ಮೀಯವಾಗಿ ಮುಟ್ಟಿ ಆರೈಕೆ ಮಾಡುವುದು ತುಂಬಾ ಅಗತ್ಯ. ಆದರೆ, ದಲಿತ ಮಹಿಳೆಯರನ್ನು ಮುಟ್ಟುವುದಕ್ಕೇ ಹಿಂದುಮುಂದು ನೋಡುತ್ತಿದ್ದ ಸರ್ಕಾರಿ ಆರೋಗ್ಯ ಪಾಲನಾ ನೌಕರರು ಈ ಅಮಾಯಕ ಮಹಿಳೆಯರಿಗೆ ಹೆರಿಗೆ-ಪೂರ್ವದಲ್ಲಿ ಮತ್ತು ಹೆರಿಗೆ-ನಂತರದಲ್ಲಿ ಅಂತಹ ಅತ್ಯಗತ್ಯ ಆರೈಕೆಯೇ ಸಿಗದಂತೆ ಮಾಡುತ್ತಿದ್ದರು. ದಲಿತ ಮಹಿಳೆಯರಿಗೆ ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಹೋಗಿ ಅಲ್ಲಿನ ಆರೋಗ್ಯ ಸಿಬ್ಬಂದಿಗಳನ್ನು ಎದುರುಗೊಳ್ಳುವುದು ಎಂದರೆ ಅಸ್ಪಶ್ಯತೆ ಮತ್ತು ಜಾತಿತಾರತಮ್ಯಗಳನ್ನು ಅನುಭವಿಸುವುದಾಗಿರುತ್ತಿತ್ತೇ ಹೊರತು ಆರೋಗ್ಯ, ಯೋಗಕ್ಷೇಮ ಮತ್ತು ಘನತೆಯನ್ನು ಪಡೆಯುವುದಾಗಿರುತ್ತಿರಲಿಲ್ಲ. ವಿಧವಾ ವೇತನ, ವೃದ್ಧಾಪ್ಯ ವೇತನ, ಅಂಗವಿಕಲ ವೇತನಗಳಂತಹ ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯುವುದಕ್ಕೆ ಅಗತ್ಯವಿರುವ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಪಡೆಯಬೇಕೆಂದರೆ ಡಾಕ್ಟರಿಗೆ ಲಂಚ ಕೊಡಬೇಕಿತ್ತು; ಈ ಭ್ರಷ್ಟಾಚಾರ, ಅನಧಿಕೃತ ಹಣನೀಡಿಕೆಗಳು ವಾಸ್ತವದಲ್ಲಿ ಬಡವರಾಗಿರುವ, ನಿರ್ಗತಿಕರಾಗಿರುವ ಈ ದಲಿತರ ಪಾಲಿಗೆ ಹೆಚ್ಚುವರಿಯಾದ ಅನೌಪಚಾರಿಕ ತೆರಿಗೆಗಳೇ ಆಗಿರುತ್ತಿದ್ದವು. ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನ ಮರಳಿ ಪಡೆಯುವುದಕ್ಕಾಗಿ "ನೋಡಿ ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರ" ಎಂಬ ಘೋಷಣೆಯಡಿಯಲ್ಲಿ ಜೆ.ಎಂ.ಎಸ್ ಅಭಿಯಾನವನ್ನೇ ನಡೆಸಿತು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರಗಳನ್ನು ಪ್ರತಿರೋಧಿಸುವುದು, ಆರೋಗ್ಯ ಕೇಂದ್ರಗಳಿಗೆ ನಿರಂತರವಾಗಿ ಭೇಟಿ ನೀಡುತ್ತಾ ಆರೋಗ್ಯ ಪಾಲನಾ ಚಟುವಟಿಕೆಗಳ ಮೇಲೆ ನಿಗಾ ಇಡುವುದು ಹಾಗೂ ಆರೋಗ್ಯ ಕೇಂದ್ರಗಳೊಂದಿಗೆ ರಚನಾತ್ಮಕವೂ, ವಿಮರ್ಶಾತ್ಮಕವೂ ಆದ ಚರ್ಚೆ, ವಾಗ್ವಾದಗಳನ್ನು ನಡೆಸುವುದು ಮುಂತಾದ ಕಾರ್ಯಚಟುವಟಿಕೆಗಳು ಈ ಆಂದೋಲನದ ಭಾಗವಾಗಿದ್ದವು.





ಗ್ರಾಮ ಪಂಚಾಯತಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಾರ್ವಜನಿಕ ಪಡಿತರ ವ್ಯವಸ್ಥೆಗಳು (ನ್ಯಾಯಬೆಲೆ ಅಂಗಡಿಗಳು), ಅಂಗನವಾಡಿಗಳು, ಸರ್ಕಾರಿ ಶಾಲೆಗಳು ಮುಂತಾದ ಸಾರ್ವಜನಿಕ ಸೇವಾ ಸಂಸ್ಥೆಗಳಲ್ಲಿ ನಮಗೆ ಸಿಗಬೇಕಾದ ಸ್ಥಾನಮಾನ, ಹಕ್ಕು, ಅಧಿಕಾರಗಳನ್ನು ಪಡೆಯುವುದಕ್ಕೆ ಪ್ರಾರಂಭಿಸಿದೆವು.

90ರ ದಶಕದ ಮಧ್ಯಭಾಗದಲ್ಲಿ ಬಾಲಕಾರ್ಮಿಕರ ಸಂಖ್ಯೆಯಲ್ಲಿ ರಾಯಚೂರು ಜಿಲ್ಲೆ ದೇಶದಲ್ಲೇ ಮೊದಲ ಸ್ಥಾನದಲ್ಲಿತ್ತು! ಜಾತಿದಮನ, ಊಳಿಗಮಾನ್ಯ ಆಧಿಪತ್ಯ ಮತ್ತು ಕಡುಬಡತನಗಳು ಮೊದಲೇ ಸರಿಯಾಗಿ ಕಾರ್ಯನಿರ್ವಹಿಸದೇ ಇರುತ್ತಿದ್ದ ಪ್ರಾಥಮಿಕ ಶಾಲೆಗಳಿಂದ ದಲಿತ ಮಕ್ಕಳನ್ನು ಹೊರದಬ್ಬಿ ಉಳ್ಳವರ ಹೊಲಮನೆಗಳಲ್ಲಿ ಜೀತದಾಳುಗಳಾಗಿ ದುಡಿಯುವಂತೆ ಮಾಡಿದ್ದವು. ಪ್ರಾಥಮಿಕ ಶಾಲೆಗಳು ದಲಿತ ಮಕ್ಕಳ ಕೈಗೆಟುಕುವಂತೆ ಮಾಡುವುದಕ್ಕಾಗಿ ಜೆ.ಎಂ.ಎಸ್ ನಡೆಸುತ್ತಿದ್ದ ಪ್ರಯತ್ನಗಳ ಜೊತೆಗೆ, ಮಕ್ಕಳ ಮೇಲೆ ನಡೆಯುತ್ತಿದ್ದ ವ್ಯವಸ್ಥೆಯ ಸಾಂಸ್ಥಿಕ ಹಿಂಸೆಗೆ ಪ್ರತಿರೋಧವೊಡ್ಡಿ, ಅವರ ಬದುಕಿನ ಘನತೆಯನ್ನು ಪುನರ್‌ಸ್ಥಾಪಿಸುವ ಮಹಾತ್ವಾಕಾಂಕ್ಷೆಯೊಂದಿಗೆ 2000ನೇ ಇಸ್ವಿಯಲ್ಲಿ ಮರ್ಕಂದಿನ್ನಿ ಹಳ್ಳಿಯಲ್ಲಿ (ಪೋತ್ನಾಳದಿಂದ ಸುಮಾರು 12 ಕಿ.ಮೀ. ದೂರದಲ್ಲಿರುವ ಊರು) 'ಚಿಲಿಪಿಲಿ ಬಾಲಕಾರ್ಮಿಕರ ವಿಶೇಷ ಶಾಲೆ'ಯೂ ಪ್ರಾರಂಭವಾಯಿತು. ಪ್ರಾರಂಭಿಕ ವರ್ಷಗಳಲ್ಲಿ, ಅಂದರೆ 2000-2008ರ ಅವಧಿಯಲ್ಲಿ, ಈ ಶಾಲೆ ದಲಿತ ಕೇರಿಯಲ್ಲೇ ಇದ್ದ ಸಮುದಾಯ ಕೇಂದ್ರವೊಂದರಲ್ಲಿ (ಅಂಬೇಡ್ಕರ್ ಭವನ) ನಡೆಯುತ್ತಿತ್ತು. ನಂತರ 2008-2015ರ ಅವಧಿಯಲ್ಲಿ ಅದು ಜೆ.ಎಂ.ಎಸ್ ಕೇಂದ್ರಕ್ಕೆ (ಪೋತ್ನಾಳ) ವರ್ಗಾವಣೆಗೊಂಡು ಹುಡುಗ ಮತ್ತು ಹುಡುಗಿಯರ ವಸತಿಶಾಲೆಯಾಗಿ ಪರಿವರ್ತನೆಯಾಗಿ ಕಾರ್ಯನಿರ್ವಹಿಸುತ್ತಿದೆ.





ಶಿಕ್ಷಣದಿಂದ ವಂಚಿತರಾದ ನಾವು ನಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕೆಂದು ಹಾಗೂ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ನಮ್ಮ ನ್ಯಾಯೋಚಿತ ಸ್ಥಾನಮಾನ ಪಡೆಯಬೇಕೆಂದು ನಿರ್ಧರಿಸಿದೆವು.

ರಾಯಚೂರು ಜಿಲ್ಲೆಯ ಪೋತ್ನಾಳ್ ಹಳ್ಳಿಯ ಸುತ್ತಮುತ್ತ ಸಿಂಧನೂರು ಮತ್ತು ಮಾನ್ವಿ ತಾಲೂಕುಗಳ ಉದ್ದಗಲಕ್ಕೂ ಚದುರಿದ್ದ ಸುಮಾರು 50 ಹಳ್ಳಿಗಳಲ್ಲಿ ರೂಪುಗೊಂಡಿದ್ದ ಮಹಿಳಾ ಘಟಕಗಳೇ ಜೆ.ಎಂ.ಎಸ್ ನಿರ್ಮಾಣದ ಇಟ್ಟಿಗೆಗಳಾಗಿದ್ದವು. ಪ್ರತೀ ಹಳ್ಳಿಯಲ್ಲಿ ವಾರದ ಸಭೆಗಳನ್ನು ನಡೆಸುವುದು. ಜಾತಿ–ವರ್ಗ –ಪುರುಷಾಧಿಪತ್ಯಗಳ ಕುರಿತು ದೃಷ್ಟಿಕೋನ ರೂಪಿಸುವ ಚರ್ಚೆಗಳನ್ನು ಸಂಘಟಿಸುವುದು. ತಮ್ಮ ತಮ್ಮ ಗುಂಪಿನ ಹಣಕಾಸಿನ ಉಳಿಕೆಯನ್ನು ನಿಭಾಯಿಸುವ ಮತ್ತು ಬ್ಯಾಂಕುಗಳೊಂದಿಗೆ ಮಾತುಕತೆಯ ಮೂಲಕ ವ್ಯವಹಾರ ಮಾಡುವ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು. ಶೌಚ ವ್ಯವಸ್ಥೆ. ಕುಡಿಯುವ ನೀರಿನ ಸೌಲಭ್ಯಗಳಿಗಾಗಿ ದನಿ ಎತ್ತುವುದು. ಅಂಗನವಾಡಿಯ ಕಾರ್ಯನಿರ್ವಹಣೆಯ ಮೇಲೆ ನಿಗಾ ಇಡುವುದು. ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ (ನ್ಯಾಯಬೆಲೆ ಅಂಗಡಿಗಳಲ್ಲಿ) ದವಸಧಾನ್ಯಗಳ ಲಭ್ಯತೆಯನ್ನು ಖಾತ್ರಿಪಡಿಸುವುದು. ಗ್ರಾಮಸಭೆಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸುವುದು. ವಸತಿ. ಮಕ್ಕಳಿಗೆ ಸ್ಕಾಲರ್‌ಷಿಪ್ ಮುಂತಾದ ಸರ್ಕಾರಿ ಸೌಲಭ್ಯಗಳನ್ನು ಪಡೆಯುವುದಕ್ಕೆ ಹೆಸರುಗಳನ್ನು ನೋಂದಣಿ ಮಾಡಿಸುವುದು ಮುಂತಾದ ಚಟುವಟಿಕೆಗಳ ಮೂಲಕ ಈ ಮಾದಿಗ ಮಹಿಳೆಯರು ತಮ್ಮದೇ ಆದ ಅಸ್ಮಿತೆಯನ್ನು ಕಟ್ಟಿಕೊಳ್ಳುವ ಸೃಜನಶೀಲ ಮಾರ್ಗೋಪಾಯಗಳನ್ನು ಕಂಡುಕೊಂಡರು. ಈ ಪ್ರಕ್ರಿಯೆಯಲ್ಲೇ ಹಿಂಸೆ. ದೌರ್ಜನ್ಯ ಮತ್ತು ತಾರತಮ್ಯಗಳ ಬಗ್ಗೆ ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುತ್ತಿತ್ತು.



ಈ ನಡುವೆ,

ಮನೆಯ

ಒಳಗೂ, ಹೊರಗೂ

ಮಹಿಳೆಯರ ಮೇಲೆ

ನಡೆಯುತ್ತಿದ್ದ

ದೌರ್ಜನ್ಯ,

ತಾರತಮ್ಯಗಳ

ವಿರುದ್ಧವೂ ನಾವು

ನಮ್ಮ

ಪ್ರತಿಭಟನೆಗಳನ್ನು

ಮುಂದುವರೆಸಿದೆವು.



ತಮ್ಮ ಹಳ್ಳಿಗಳಲ್ಲಿ ತಮ್ಮ ನ್ಯಾಯಸಮ್ಮತವಾದ ಸ್ಥಾನಮಾನಗಳನ್ನು ಮರಳಿ ಪಡೆಯುವುದು ಎಂದರೆ ಸಾರಾಂಶದಲ್ಲಿ ಮಹಿಳೆಯರು ಒಂದು ಸಮಷ್ಟಿಯಾಗಿ ಪ್ರತಿಷ್ಠಾಪಿತ ದಮನ ಮತ್ತು ಶೋಷಣೆಗಳನ್ನು ಪ್ರತಿರೋಧಿಸುವುದೇ ಆಗಿತ್ತಾದ್ದರಿಂದ ಮಹಿಳೆಯರ ಪಾಲಿಗೆ ವಾಸ್ತವದಲ್ಲಿ ಅದೊಂದು ಸುದೀರ್ಘ ಹೋರಾಟವೇ ಆಗಿತ್ತು. ಒಗ್ಗಟ್ಟಾಗಿ ಸೇರುವ, ಒಗ್ಗಟ್ಟಿನಿಂದ ಮುನ್ನಾಗುವ ಹಾಗೂ ಒಗ್ಗಟ್ಟಿನಿಂದಲೇ ಕೆಲಸ ಮಾಡುವ ತಮ್ಮ ಶಕ್ತಿಸಾಮರ್ಥ್ಯಗಳನ್ನು ನಿರೂಪಿಸುವುದಕ್ಕಾಗಿ ಈ ಮಹಿಳೆಯರನ್ನು ನಿರಂತರ ಪರೀಕ್ಷೆಗಳಿಗೆ ದೂಡಲಾಯಿತು. ಅದರರ್ಥ, ಈ ಮಹಿಳೆಯರು ತಮ್ಮ ತಮ್ಮ ಕುಟುಂಬಗಳ ಒಳಗೇ ಸವಾಲುಗಳನ್ನು ಎದುರಿಸಬೇಕಾಯಿತು; ತಮ್ಮ ದಲಿತ ಸಮುದಾಯದ ಹಂತದಲ್ಲೂ ಅವರು ಸಮಷ್ಟಿ ಪುರುಷಪ್ರಧಾನ ಪ್ರತಿರೋಧಕ್ಕೆ ಮುಖಾಮುಖಿಯಾಗಬೇಕಾಯಿತು; ಅಷ್ಟೇ ಅಲ್ಲದೇ, ಹಳ್ಳಿಗಳಲ್ಲಿ ಆಳವಾಗಿ ಬೇರೂರಿದ್ದ ಉಗ್ರ ಪುರುಷಪ್ರಧಾನ್ಯತೆಯ ತಡೆಗೋಡೆಗಳಿಗೆ ಸವಾಲೊಡ್ಡಬೇಕಾಯಿತು. ಕೆಲವು ಸಂದರ್ಭಗಳಲ್ಲಂತೂ ಈ ಮಹಿಳೆಯರು ಪುರುಷಾಧಿಪತ್ಯದ ಎಲ್ಲಾ ಅಡೆತಡೆಗಳನ್ನು ಧೈರ್ಯದಿಂದ ಬದಿಗೆ ಸರಿಸಿ ಸರ್ಕಾರದ ಸಾರ್ವಜನಿಕ ಕೆಲಸಗಳ ಗುತ್ತಿಗೆಗಳನ್ನು ಪಡೆಯುವ ತನಕವೂ ಹೋದರು. ಮುದ್ದನಗುಡ್ಡಿ ಹಳ್ಳಿಯಲ್ಲಿ ದಲಿತ ಮಹಿಳೆಯರೇ ಗುತ್ತಿಗೆ ಪಡೆದು ನಿರ್ಮಿಸಿದ ರಸ್ತೆ ಇದಕ್ಕೊಂದು ಅದ್ಭುತ ನಿದರ್ಶನ. ದಲಿತ ಮಹಿಳೆಯರ ಇಂತಹ ಒಂದೊಂದು ಸಾಹಸವೂ ಅಸಲಿಗೆ ವಿಭಿನ್ನ ಶಕ್ತಿಕೇಂದ್ರಗಳ ವಿರುದ್ಧದ ದಿಟ್ಟ ಹೋರಾಟಗಾಥೆಯಾಗಿತ್ತು. ಸಂಘಗಳ ನೆರಳಿನಲ್ಲಿ ಪರಸ್ಪರ ಒಡನಾಡುವ ಮೂಲಕ ಈ ಮಹಿಳೆಯರು ಬೆಳೆಸಿಕೊಂಡ ಸೌಹಾರ್ದ ಐಕ್ಯತೆಯೇ ಅವರಲ್ಲಿ ಅಂತಹ ಅದ್ಭುತ ಆತ್ಮಸ್ಥೈರ್ಯವನ್ನು ತುಂಬಿತ್ತು.



• ಸ್ವಸಹಾಯ ಸಂಘಗಳಿಗೆ ಸಾಮರ್ಥ್ಯ ತರಬೇತಿ



ನಮ್ಮ ಹಳ್ಳಿಗಳ ರಸ್ತೆಗಳಲ್ಲೂ, ಅವುಗಳ ನಿರ್ಮಾಣದಲ್ಲೂ, ನಾವು ನಮ್ಮ ಅಧಿಕಾರವನ್ನು ಸ್ಥಾಪಿಸಿದೆವು.

ಒಂದೆಡೆ ಹೊರಗೆ ಕೃಷಿ ಕೂಲಿಕಾರ್ಮಿಕರಾಗಿ ದುಡಿಯುತ್ತಲೇ, ಇನ್ನೊಂದೆಡೆ ಅತ್ಯಲ್ಪ ಸಂಪನ್ಮೂಲಗಳಿಂದ ಇಡೀ ಕುಟುಂಬದ ಖರ್ಚುವೆಚ್ಚಗಳನ್ನು ನಿಭಾಯಿಸುವ ದಲಿತ ಮಹಿಳೆಯರಿಗೆ ಅಪಾಯವನ್ನೆದುರಿಸುವ ಅನಿವಾರ್ಯತೆ ಇರುವ ಉದ್ಯಮಶೀಲ ಸ್ಫೂರ್ತಿ ಅಂತರ್ಗತವಾಗಿಯೇ ಬೆಳೆದಿರುತ್ತದೆ. ಅಂತಹ ಸಮಷ್ಟಿ ಉದ್ಯಮಶೀಲತೆಯನ್ನು ಬಳಸಿ ಏನಾದರೂ ಸಾಧನೆ ಮಾಡುವುದಕ್ಕೆ ಅವರಿಗಿರುವ ಅತಿದೊಡ್ಡ ತಡೆಗೋಡೆ ಎಂದರೆ ಅವಕಾಶಗಳ ಕೊರತೆ. ಸಾಂಸ್ಕೃತಿಕವಾಗಿ ಜನರನ್ನು ಒಂದೆಡೆ ಸೇರಿಸುವ ಮೂಲಕ, ಸಮಷ್ಟಿ ಉದ್ಯಮಗಳ ಸ್ಥಾಪನೆಗೆ ನಾಂದಿ ಹಾಡುವ ಮೂಲಕ ಜೆ.ಎಂ.ಎಸ್ ಅವರಿಗೆ ಅವರ ಹಳ್ಳಿಗಳಲ್ಲೇ ಅಂತಹ ಅವಕಾಶಗಳನ್ನು ಸೃಷ್ಟಿಸಿತು. "ಚಿಗುರು ಉದ್ಯಮ"ದ ಹೆಸರಿನಡಿಯಲ್ಲಿ ಬೇವಿನಗೊಬ್ಬರ ತಯಾರಿಕೆ ಹಾಗೂ ಟೆರ್ರಾಕೋಟ ವಸ್ತುಗಳ ಮತ್ತು ಆಭರಣಗಳ ತಯಾರಿಕೆಗಳಂತಹ ಕೆಲವು ಉದ್ಯಮಗಳು ಅತ್ಯುತ್ತಮ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುವ ಮೂಲಕ ಎಲ್ಲಾ ನಿರೀಕ್ಷೆಗಳನ್ನೂ ಮೀರಿ ಸಾಧನೆ ಮಾಡಿದವು. ತೀರ್ಮಾನ ರೂಪಣೆಯ ಪ್ರಕ್ರಿಯೆಯ ಮೇಲೆ ನಿಯಂತ್ರಣ ಮತ್ತು ಮಾಲೀಕತ್ವ ಹೊಂದುವಂತಹ ಪ್ರಯೋಗಗಳನ್ನೂ ಇಲ್ಲಿ ಮಾಡಲಾಯಿತು. ಬೇವಿನಗೊಬ್ಬರ ತಯಾರಿಕಾ ಘಟಕವನ್ನು ಮುದ್ದನಗುಡ್ಡಿ ಹಳ್ಳಿಯ ಮಹಿಳೆಯರ ತಂಡವೇ ನೋಡಿಕೊಳ್ಳುತ್ತಿದ್ದು ಅಲ್ಲಿ ತಯಾರಾದ ಬೇವಿನಗೊಬ್ಬರ ಗುಣಮಟ್ಟವನ್ನು ಸ್ಥಳೀಯ ರೈತರೇ ಪರೀಕ್ಷಿಸಿ ಪ್ರಮಾಣೀಕರಿಸಿದ್ದಾರೆ. ಚಿಗುರು ಉದ್ಯಮವು ಮಹಿಳೆಯರಿಗೆ ಉದ್ಯಮಶೀಲತೆ ಮತ್ತು ನಾಯಕತ್ವಕ್ಕಾಗಿ ಹಲವು ಪ್ರಶಸ್ತಿ-ಪುರಸ್ಕಾರಗಳನ್ನು ಗಳಿಸಿಕೊಟ್ಟಿದೆ. ಎಲ್ಲಾ ಅಡೆತಡೆಗಳನ್ನು ಎದುರಿಸಿ ಏಳುಬೀಳು--ಗಳೊಂದಿಗೆ ಮುನ್ನಡೆದ ಮಹಿಳೆಯರ ದೃಢ ಪಯಣಕ್ಕೀಗ 16 ವರ್ಷಗಳು ತುಂಬಿವೆ. ಈ ಆಂದೋಲನವನ್ನು ಮುಂದಕ್ಕೆ ಕೊಂಡೊಯ್ಯಲು ಹೆಚ್ಚು ಸುಶಿಕ್ಷಿತರಾದ ಯುವಜನತೆ ಸಂಘಟನೆಯನ್ನು ಸೇರಬೇಕು, ಹೊಸ ನಾಯಕತ್ವ ಬೆಳೆಯಬೇಕು ಮತ್ತು ಆ ಮೂಲಕ ಸಮಾನತೆ, ಘನತೆ ಮತ್ತು ನ್ಯಾಯಕ್ಕಾಗಿನ ದಲಿತ ಮಾದಿಗ ಮಹಿಳೆಯರ ಹೋರಾಟವನ್ನು ಇನ್ನಷ್ಟು ಬೆಳೆಸಿ ಹೊಸ ಹೊಸ ಹಳ್ಳಿಗಳಿಗೆ ವಿಸ್ತರಿಸಬೇಕು. ಭವಿಷ್ಯದಲ್ಲಿ ಎದುರಾಗಬಹುದಾದ ಹೊಸ ಹೊಸ ಸವಾಲುಗಳನ್ನು ಸ್ವೀಕರಿಸುತ್ತಾ ಈ ಜಾಗೃತಿ ಅಭಿಯಾನವನ್ನು ಗಟ್ಟಿಗೊಳಿಸಬೇಕು ಎಂದು ಹಳೆಯ ನಾಯಕತ್ವ ನಿರೀಕ್ಷಿಸುತ್ತಿದೆ.





ನಾವು ಅಂತರ್ಗತವಾಗಿ ಉದ್ಯಮಿಗಳು. ಸಮಷ್ಟಿ ಶಕ್ತಿಯ ಮೂಲಕ ನಾವದನ್ನು ಪ್ರದರ್ಶಿಸಿದ್ದೇವೆ. ಈ ನಡುವೆ, ಕ್ರೀಡೆಯಲ್ಲಿ ಭಾಗವಹಿಸಿದ್ದು ನಮ್ಮ ಮನಸ್ಸನ್ನು ತೆರೆಯಿತು, ನಮ್ಮ ಕನಸುಗಳಿಗೆ ರೆಕ್ಕೆಪುಕ್ಕ ಬೆಳೆದಂತಾಯಿತು.

ಜಾಗೃತ ಮಹಿಳಾ ಸಂಘಟನೆಗೆ ಟ್ರಾಕ್ಟರ್ ಬಂದಿದ್ದು ಮಹಿಳೆಯರಲ್ಲಿ ಮಾಲಿಕತ್ವ ಮತ್ತು ಆತ್ಮಸ್ಥೈರ್ಯದ ಹೊಸ ಭಾವನೆಯನ್ನು ಮೂಡಿಸಿತು. ಇದರಿಂದಾಗಿ, ಬೇವಿನ ಬೀಜಗಳ ಸಾಗಾಟಕ್ಕೆ, ಪ್ರದರ್ಶನ, ಪ್ರತಿಭಟನೆಗಳಿಗೆ ಮತ್ತು ಭೂಅಭಿವೃದ್ಧಿಗಾಗಿ ಮಹಿಳೆಯರನ್ನು ಕರೆದೊಯ್ಯುವುದಕ್ಕೆ ಮೇಲ್ಜಾತಿಯ ಟ್ರಾಕ್ಟರ್ ಮಾಲಿಕರನ್ನೇ ಅವಲಂಭಿಸಬೇಕಾದ ಅನಿವಾರ್ಯತೆ ದೂರವಾಯಿತು. ಬೇವಿನಗೊಬ್ಬರ, ಭೂಅಭಿವೃದ್ಧಿ ಮತ್ತು ಮಕ್ಕಳ ಚಟುವಟಿಕೆಗಾಗಿ ಸಲಕರಣೆಗಳ ಸಾಗಾಣಿಕೆ ಮುಂತಾದ ಮರುನಿರ್ಮಾಣ ಚಟುವಟಿಕೆಗಳಲ್ಲಿ ಈ ಟ್ರಾಕ್ಟರ್ ಬಹುಮುಖ್ಯ ಅಂಗವಾಗಿ ಮಾರ್ಪಟ್ಟಿತು. 2009ರ ಪ್ರವಾಹ ಸಮಯದಲ್ಲಿ ಸಂತ್ರಸ್ತರಿಗೆ ಪರಿಹಾರ ಸಾಮಗ್ರಿ ವಿತರಿಸುವಲ್ಲಿ ಈ ಟ್ರಾಕ್ಟರ್ ಬಹುಮುಖ್ಯ ಪಾತ್ರ ನಿರ್ವಹಿಸಿತು. ನಾಲ್ಕು ಹಳ್ಳಿಗಳ 55 ಕುಟುಂಬಗಳ ಭೂಮಿಯನ್ನು ಅಭಿವೃದ್ಧಿಪಡಿಸುವಲ್ಲಿಯೂ ಇದು ಅತ್ಯುತ್ತಮವಾಗಿ ಬಳಕೆಯಾಯಿತು. ಆಹಾರ ಹಕ್ಕಿಗಾಗಿನ ಚಳವಳಿಯ ಭಾಗವಾಗಿ ನಡೆದ ಸಾರ್ವಜನಿಕ ಪಡಿತರ ವ್ಯವಸ್ಥೆಯ (ನ್ಯಾಯಬೆಲೆ ಅಂಗಡಿ) ಪುನರುಜ್ಜೀವನ ಅಭಿಯಾನದಲ್ಲೂ ಈ ಟ್ರಾಕ್ಟರ್ ಸಂಚಾರಿ ಅಭಿಯಾನ ರಂಗಮಂದಿರವಾಗಿ ಕಾರ್ಯನಿರ್ವಹಿಸಿತು; ಘೋಷಣೆ ಕೂಗುತ್ತಾ ಪ್ರತಿಭಟನಾ ಮೆರವಣಿಗೆಗಳಿಗೆ ಹೊರಟಿದ್ದ ಮಹಿಳೆಯರನ್ನು ಪ್ರತಿಭಟನಾ ಸ್ಥಳಕ್ಕೆ ಕರೆದೊಯ್ಯುವ ವಾಹನವಾಗಿಯೂ ಇದು ಬಳಕೆಯಾಯಿತು. ಹೀಗೆ, ಜೆ.ಎಂ.ಎಸ್‌ನ ಹಲವಾರು ಚಟುವಟಿಕೆಗಳಲ್ಲಿ ಅದು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿತು.



ಮ್ಯಾನ್ವಿ: ಉ.ಖಾ.ಕೂಲಿ ಹಣ ಪಾವತಿಸಲು ಒತ್ತಾಯಿಸಿ

## ಮಹಿಳೆಯರಿಂದ ತಾ.ಪಂ. ಕಾರ್ಯಾಲಯದ ಮುಂದೆ ಧರಣಿ

ಸುದ್ದಿಮೂಲ ವಾರ್ತೆ ಮಾನ್ವಿ ಜೂ.21



ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೆಲಸ ಮಾಡಿದ ಮಹಿಳೆಯರಿಗೆ ಕೂಲಿ ಹಣ ನೀಡಬೇಕೆಂದು ಒತ್ತಾಯಿಸಿ ನೂರಾರು ಮಹಿಳೆಯರು ಸೋಮವಾರ ತಾ.ಪಂ.ಕಾರ್ಯಾಲಯದ ಮುಂದೆ ಧರಣಿ ನಡೆಸಿದರು.

ಪೋತ್ನಾಳ್‌ದ ಜಾಗೃತಿ ಮಹಿಳಾ ಸಂಘಟನೆ ಮತ್ತು ನವ ಜೀವನದ ಮಹಿಳಾ ಒಕ್ಕೂಟದ ನೇತೃತ್ವದಲ್ಲಿ, ಉಟಕನೂರು, ಪೋತ್ನಾಳ್, ಹಿರೇಕೊಟ್ನೆಕಲ್, ಚಿಕ್ಕಕೊಟ್ನೆಕಲ್, ಬಾಗಲವಾಡ, ಅಮೀನಗಡ, ಸಾದಾಪುರ, ಕುರ್ಡಿ, ಬ್ಯಾಗವಾಟ ಹಾಗೂ ತೋರಣದಿನ್ನಿ ಗ್ರಾ.ಪಂ.ಗಳ ನೂರಾರು ಮಹಿಳಾ ಕೂಲಿಕಾರರು ಬಾಕಿ ಇರುವ ಕೂಲಿ ಹಣ ನೀಡಬೇಕೆಂದು ಒತ್ತಾಯಿಸಿ ಬೆಳಗ್ಗೆಯಿಂದ ಸಂಜೆವರೆಗೆ ಪ್ರತಿಭಟನೆ ನಡೆಸಿದರು.

ಪ್ರಮುಖ ಬೇಡಿಕೆಗಳಾದ ಬಾಕಿ ಕೂಲಿ ನೀಡಬೇಕು, ಜಾಬ್ ಕಾರ್ಡ್ ವಿತರಣೆ ಮಾಡಬೇಕು, ಗ್ರಾ.ಪಂ. ಯೋಜನಾಧಿಕಾರಿಗಳು ಪಂಚಾಯತಿಯಲ್ಲಿದ್ದು ಸರಿಯಾಗಿ ಕಾರ್ಯ ನಿರ್ವಹಿಸಬೇಕು, ಕೆಲಸ ನೀಡದಿದ್ದರೆ ನಿರುದ್ಯೋಗ ಭತ್ಯೆ ನೀಡಬೇಕು ಎಂಬ ಪ್ರಮುಖ ಬೇಡಿಕೆಗಳ ಮನವಿ ಪತ್ರವನ್ನು ತಾ.ಪಂ.ಕಾರ್ಯಾಲಯದ ವ್ಯವಸ್ಥಾಪಕ ರಾಮದಾಸ್ ಅವರಿಗೆ ಸಲ್ಲಿಸಿದರು.

ಮನವಿ ಸ್ವೀಕರಿಸಿದ ವ್ಯವಸ್ಥಾಪಕರು ಸಂಬಂಧಪಟ್ಟ ಗ್ರಾ.ಪಂ.ಗಳ ಪಿಡಿಓಗಳಿಗೆ ಈ ಕುರಿತಂತೆ ಸೂಚನೆ ನೀಡಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು.

ಈ ಧರಣಿಯಲ್ಲಿ ಜಾಗೃತಿ ಮಹಿಳಾ ಸಂಘಟನೆಯ ಪದಾಧಿಕಾರಿಗಳಾದ ಚಿನ್ನಮ್ಮ, ನರಸಮ್ಮ, ಸುನಂದಾ, ಸಲೀನಮ್ಮ, ಸಿದ್ದಮ್ಮ, ರತ್ನಮ್ಮ ಇನ್ನಿತರರು ಭಾಗವಹಿಸಿದ್ದರು.




ಒಂದು ದಿನ ಟ್ರ್ಯಾಕ್ಟರ್ ಮನೆಗೆ ಬಂತು; ನಮ್ಮನ್ನೆಲ್ಲಾ ಹಲವು ಸ್ಥಳಗಳಿಗೆ ಕೊಂಡೊಯ್ಯಿತು!

ಬಹುತೇಕ ದಲಿತ ಕುಟುಂಬಗಳು ಭೂಹೀನ ಕೃಷಿಕಾರ್ಮಿಕರಾಗಿದ್ದರಾದರೂ, ಅವರಲ್ಲಿ ಕೆಲವರು ವಿವಿಧ ಕಲ್ಯಾಣ ಕಾರ್ಯಕ್ರಮಗಳಡಿಯಲ್ಲಿ ಸರ್ಕಾರದಿಂದ ಒಂದಿಷ್ಟು ಭೂಮಿಯನ್ನು ಪಡೆದವರೂ ಇದ್ದರು. ಆದರೆ, ಅವರ ಭೂಮಿ ಸಾಗುವಳಿಯಾಗದೇ ಹಾಗೆಯೇ ಪಾಳು ಬಿದ್ದಿತ್ತು. ಏಕೆಂದರೆ, ಅದನ್ನು ಉಳುಮೆಯೋಗ್ಯ ಭೂಮಿಯನ್ನಾಗಿ ಪರಿವರ್ತಿಸುವುದಕ್ಕೆ ಹೆಚ್ಚು ಬಂಡವಾಳದ ಅವಶ್ಯಕತೆಯಿತ್ತು. ಅಷ್ಟು ಹಣವನ್ನು ವ್ಯಯಿಸುವ ಸ್ಥಿತಿಯಲ್ಲಿ ಈ ಬಡ ದಲಿತ ಕುಟುಂಬಗಳು ಇರಲಿಲ್ಲ. ನೈಸರ್ಗಿಕ ಸಂಪನ್ಮೂಲಗಳು ತಳಸಮುದಾಯಗಳಿಗೆ ಕೈಗೆಟುಕುವಂತೆ ಮಾಡುವುದು ಮತ್ತು ಅವುಗಳ ಮೇಲೆ ಆ ಸಮುದಾಯಗಳ ಮಾಲೀಕತ್ವ ಹೊಂದುವಂತೆ ನೋಡಿಕೊಳ್ಳುವುದು ಸಮುದಾಯ ಸಬಲೀಕರಣದ ಅತಿಮುಖ್ಯ ಅಂಶ ಎಂದು ಜೆ.ಎಂ.ಎಸ್ ಬಲವಾಗಿ ನಂಬಿದೆ. ಈ ನಂಬಿಕೆಯೇ ನಾಲ್ಕು ಹಳ್ಳಿಗಳಲ್ಲಿನ 55 ಕುಟುಂಬಗಳ ಸುಮಾರು 125 ಎಕರೆ ಜಮೀನುಗಳನ್ನು ಒಗ್ಗಟ್ಟಿನಿಂದ ಹಸನುಮಾಡಿ, ಸಾವಯವ ಗೊಬ್ಬರ ಹಾಕಿ ಅವುಗಳನ್ನು ಉಳುಮೆಯೋಗ್ಯ ಭೂಮಿಯನ್ನಾಗಿ ಪರಿವರ್ತಿಸುವುದಕ್ಕೆ ಜನರನ್ನು ಪ್ರೇರೇಪಿಸಿತು. ಈ ಸಮುದಾಯಗಳು ಅರೆಕ್ಷಾಮ ವರ್ಷಗಳಲ್ಲೂ ಕೂಡ ಅಷ್ಟಿಷ್ಟು ಮಳೆಯನ್ನೇ ಆಧರಿಸಿ ತಮಗೆ ಆಹಾರವನ್ನಷ್ಟೇ ಅಲ್ಲದೇ ದನಕರುಗಳಿಗೆ ಮೇವನ್ನೂ ಒದಗಿಸಬಲ್ಲಂತಹ ಆಹಾರಬೆಳೆಗಳನ್ನು ಬೆಳೆದು ತೋರಿಸಿವೆ. ಈ ಜಮೀನುಗಳಲ್ಲಿ ನಿರ್ಮಾಣ ಮಾಡಿದ ಸಣ್ಣಸಣ್ಣ ನೀರುಸಂಗ್ರಹ ವ್ಯವಸ್ಥೆಗಳು ಮಣ್ಣಿನ ಸಂರಕ್ಷಣೆಯಲ್ಲಿ ಹಾಗೂ ನೀರುಸಂಗ್ರಹದಲ್ಲಿ ಬಹುಮುಖ್ಯ ಪಾತ್ರ ನಿರ್ವಹಿಸಿವೆ.





ದಶಕಗಳಿಂದ ಉಳುಮೆ ಮಾಡದೇ ಬೀಳು ಬಿದ್ದಿದ್ದ ನಮ್ಮ ಜಮೀನುಗಳನ್ನು ನಮ್ಮ ಉದ್ಯಮದ ಮೂಲಕ ಮಾತ್ರವಲ್ಲದೇ ಹಕ್ಕುಬಾದ್ಯತೆಗಳ ಬಗೆಗಿನ ನಮ್ಮ ಸಮಷ್ಟಿ ತಿಳಿವಳಿಕೆಯ ಮೂಲಕ ಮರಳಿ ಪಡೆದೆವು.

ಆರೋಗ್ಯ ಸಂಪನ್ಮೂಲಗಳ ಮೇಲೆ ದಲಿತ ಮಹಿಳೆಯರ ಸ್ವಾಯತ್ತತೆಯನ್ನು ಹೆಚ್ಚಿಸುವ ದೃಷ್ಟಿಕೋನದೊಂದಿಗೆ ಯೋಗಕ್ಷೇಮ ಮತ್ತು ಘನತೆಗಳ ವಿಶಾಲ ದೂರದೃಷ್ಟಿಯ ಭಾಗವಾಗಿ ಜೆ.ಎಂ.ಎಸ್ ಆರೋಗ್ಯ ವಿಷಯವನ್ನು ಕೈಗೆತ್ತಿಕೊಂಡಿತು. "ನಮ್ಮ ಆರೋಗ್ಯ ನಮ್ಮ ಕೈಯಲ್ಲಿ" ಎಂಬುದು ಈ ಅಭಿಯಾನದ ಘೋಷವಾಕ್ಯವಾಗಿತ್ತು. ಸರ್ಕಾರಿ ಆರೋಗ್ಯ ಕೇಂದ್ರ, ಅಂಗನವಾಡಿ ಮುಂತಾದ ಸಾರ್ವಜನಿಕ ಸಂಸ್ಥೆಗಳಲ್ಲಿ ಆರೋಗ್ಯ ಹಕ್ಕುಗಳನ್ನು ಪಡೆಯುವುದಕ್ಕಾಗಿ ಹಾಗೂ ಆರೋಗ್ಯ ಪಾಲನಾ ಸೇವೆಗಳನ್ನು ಗೌರವಯುತವಾಗಿ ಗಳಿಸಿಕೊಳ್ಳುವುದಕ್ಕಾಗಿ ಅನೇಕ ಹೋರಾಟಗಳು ನಡೆದವು. ಈ ಹೋರಾಟಗಳ ಜೊತೆಗೆ ಪ್ರಾಥಮಿಕ ಆರೋಗ್ಯ ಪಾಲನಾ ಸೇವೆಗಳನ್ನು ವಂಚಿತ ಜನಸಮುದಾಯಗಳಿಗೆ ಕೊಡಿಸುವುದಕ್ಕಾಗಿ ಆರೋಗ್ಯ ಕಾರ್ಯಕರ್ತೆಯರ ತಂಡವನ್ನು ರಚಿಸಲಾಯಿತು. ಆರೋಗ್ಯ ಪಾಲನೆಯನ್ನು ವಂಚಿತ ಸಮುದಾಯಗಳಿಗೆ ಮುಟ್ಟಿಸುವ ನಿಟ್ಟಿನಲ್ಲಿ ನಡೆದ ಬಹುಮುಖ್ಯ ಚಟುವಟಿಕೆಗ--ಳಾಗಿದ್ದವು. ಗಿಡಮೂಲಿಕೆ ಔಷಧಗಳು ಈ ಪ್ರದೇಶದ ಆರೋಗ್ಯ ಸಂಸ್ಕೃತಿಯ ಭಾಗವಾಗಿವೆ. ಆದರೆ, ಅಲೋಪಥಿಕ್ ವೈದ್ಯಕೀಯ ವ್ಯವಸ್ಥೆಯ ಅಧಿಪತ್ಯದಡಿಯಲ್ಲಿ ಈ ಗಿಡಮೂಲಿಕೆ ಔಷಧ ಪದ್ಧತಿಯನ್ನು ಮೂಲೆಗುಂಪು ಮಾಡಲಾಗಿತ್ತು. ಸ್ಥಳೀಯ ಆರೋಗ್ಯ ಸಂಪ್ರದಾಯಗಳ ಜ್ಞಾನವ್ಯವಸ್ಥೆಯಲ್ಲಿ ಪರಿಣಿತರಾಗುವಂತೆ ಕಾರ್ಯಕರ್ತೆಯರಿಗೆ ಸಂಘಟನೆಯು ತರಬೇತಿ ನೀಡಿತು. ಈ ಮಹಿಳೆಯರು ಸ್ಥಳೀಯ ಆರೋಗ್ಯ ಸಂಪ್ರದಾಯಗಳ ಬಗ್ಗೆ ಹೆಚ್ಚಿನ ಜ್ಞಾನ ಪಡೆದು ವೈದ್ಯಕೀಯ ಗಿಡಮೂಲಿಕೆಗಳನ್ನು ಬೆಳೆಸುವುದನ್ನು ಹಾಗೂ ಅವುಗಳನ್ನು ಬಳಸಿ ಔಷಧ ತಯಾರಿಸುವುದನ್ನು ಆರಾಮಾಗಿ ಕಲಿತು--ಕೊಂಡರು. ಈ ಚಟುವಟಿಕೆಗಳೊಂದಿಗೆ ಅವರಿಗೆ "ಆರೋಗ್ಯ ಕಾರ್ಯಕರ್ತೆಯರು" ಎಂಬ ಹೊಸ ಅಸ್ಮಿತೆಯೂ ಸಿಕ್ಕಿತು. ಹೀಗೆ, ಈ ಮಹಿಳೆಯರು ತಮ್ಮ ತಮ್ಮ ಸಮುದಾಯಗಳಲ್ಲಿ ರೋಗಗಳನ್ನು ಗುಣಪಡಿಸುವ ಚಿಕಿತ್ಸಕರಾಗಿ ಬೆಳೆದರು. ಈ ಪ್ರಕ್ರಿಯೆಯಲ್ಲಿ ಅವರು ಪಾರಂಪರಿಕ ಜ್ಞಾನವನ್ನಾಧರಿಸಿ ವಿವಿಧ ಚರ್ಮರೋಗಗಳು, ನೋವುಗಳು, ಪಾರ್ಶ್ವವಾಯು ಮತ್ತು ರಕ್ತಹೀನತೆಗಳಂತಹ ಹಲವು ರೋಗಗಳಿಗೆ ಔಷಧಗಳನ್ನೂ ತಯಾರಿಸತೊಡಗಿದರು.





ಪರಸ್ಪರರ ಕಥೆಗಳನ್ನು ಆತ್ಮೀಯವಾಗಿ ಆಲಿಸುವ ಮೂಲಕ, ಪರಸ್ಪರರ ಸಮಸ್ಯೆಗಳನ್ನು ಪ್ರೀತಿಯಿಂದ ಸಮಾಲೋಚಿಸುವ ಮೂಲಕ ದೇಹ ಮತ್ತು ಮನಸ್ಸುಗಳೆರಡಕ್ಕೂ ಚಿಕಿತ್ಸೆ ನೀಡಿ ಉಲ್ಲಸಿತಗೊಳಿಸಿದೆವು. ಪಾರಂಪರಿಕ ಜ್ಞಾನವನ್ನು ಬಳಸಿ ನಾವು ತೈಲ, ಕಷಾಯ, ಮುಲಾಮುಗಳನ್ನು ತಯಾರಿಸಿ ಪೊಟ್ಟಣಗಳಲ್ಲಿ ಮಾರಾಟ ಮಾಡುವ ಮೂಲಕ ನಾವು ಒಂದು ಉದ್ಯಮವಾಗಿಯೂ ಬೆಳೆದೆವು.

ಚಿಲಿಪಿಲಿ ಶಾಲೆಯು ಶಾಲಾ ಪಠ್ಯಕ್ರಮ ಆಧಾರಿತ ಶೈಕ್ಷಣಿಕ ಚಟುವಟಿಕೆಗೆ ಮಾತ್ರ ಸೀಮಿತವಾಗಿರದೇ ಎಲ್ಲಾ ದಲಿತ ಮಕ್ಕಳು ಒಟ್ಟಿಗೆ ಕುಳಿತು ಕಲಿಯುವ, ಪರಸ್ಪರರ ಸ್ಥಾನ, ಇತಿಮಿತಿಗಳನ್ನು ಗೌರವಿಸಿ ಬಾಳುವುದನ್ನು ಕಲಿಯುವ ಬದುಕಿನ ಶಾಲೆಯಾಗಿ ಮಾರ್ಪಟ್ಟಿತು. ಅಲ್ಲಿದ್ದ ಮಕ್ಕಳಲ್ಲಿ ಬಹುತೇಕರಿಗೆ 9 ವರ್ಷ ವಯಸ್ಸು ಮೀರಿದ್ದರೂ ಅವರಿಗೆ ಅಕ್ಷರ, ಅಂಕಿಗಳ ಅರಿವು ಕೊಂಚವೂ ಇರಲಿಲ್ಲ. ಆದರೆ, ಎರಡು ವರ್ಷಗಳ ಅವಿರತ ಪರಿಶ್ರಮದ ಬಳಿಕ, ಅವರಲ್ಲಿನ ಬಹುತೇಕ ಮಕ್ಕಳು ಸಮರ್ಪಕ ಅಕ್ಷರಜ್ಞಾನ ಪಡೆದು ಮುಖ್ಯವಾಹಿನಿಯ 5ನೇ ಅಥವಾ 6ನೇ ತರಗತಿಯಲ್ಲಿ ಪ್ರವೇಶ ಪಡೆದರು. ತುಂಬಾ ಪ್ರತಿಭಾವಂತರಾಗಿದ್ದ ಇನ್ನು ಕೆಲವು ಮಕ್ಕಳು ಮುಖ್ಯವಾಹಿನಿಯ 7ನೇ ಮತ್ತು 8ನೇ ತರಗತಿ-ಗಳಿಗೂ ಪ್ರವೇಶ ಪಡೆದರು. ವಿಶೇಷ ಎಂದರೆ, ಇವರಲ್ಲಿನ ಬಹುತೇಕ ಮಕ್ಕಳು ಓದಿನಲ್ಲಿ ಸಾಪೇಕ್ಷವಾಗಿ ಅನುಕೂಲಸ್ಥ ಹಿನ್ನೆಲೆಯಿಂದ ಬಂದಿದ್ದ ಮಕ್ಕಳನ್ನೂ ಹಿಂದಿಕ್ಕಿ ಮುನ್ನಡೆ ಸಾಧಿಸಿ ನಾಯಕರಾದರು. ತಡಕಲ್ ಹಳ್ಳಿಯ ರೇಣುಕ ಎಂಬ ಹುಡುಗಿಯೊಬ್ಬಳು 10ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ 78% ಅಂಕಗಳನ್ನು ಪಡೆಯುವ ಮೂಲಕ ಹಲವು ಗೌರವ, ಪುರಸ್ಕಾರಗಳಿಗೂ ಪಾತ್ರಳಾದಳು.

ಚಿಲಿಪಿಲಿ ಶಾಲೆಯ ಶಿಕ್ಷಣದ ಗುಣಮಟ್ಟ, ಶಿಕ್ಷಕರ ಬದ್ಧತೆ ಮತ್ತು ಆ ಶಾಲೆಯ ಮೇಲೆ ಮಕ್ಕಳೇ ಹೊಂದಿದ್ದ ಮಾಲೀಕತ್ವ-ದಂತಹ ವಿಷಯಗಳು ಬಹಳ ಗಮನಾರ್ಹವಾದವುಗಳು. ಈ ಅಂಶಗಳ ಕಾರಣದಿಂದಾಗಿಯೇ ಜೆ.ಎಂ.ಎಸ್ ಸಂಸ್ಥೆ 16 ವರ್ಷಗಳಷ್ಟು ಸುದೀರ್ಘ ಕಾಲದವರೆಗೆ ಯಾರಿಗೂ ಯಾವುದೇ ರೀತಿಯ ಲಂಚವನ್ನು ನೀಡದೇ ಸರ್ಕಾರಿ ಪ್ರಾಯೋಜಕತ್ವದ ಕಾರ್ಯಕ್ರಮದೊಂದಿಗೆ (ರಾಷ್ಟ್ರೀಯ ಬಾಲಕಾರ್ಮಿಕ ಕಾರ್ಯಕ್ರಮ) ಶಾಲೆಯನ್ನು ಕಾರ್ಯ-ನಿರ್ವಹಿಸಲು ಸಾಧ್ಯವಾಗಿದ್ದು. ಚಿಲಿಪಿಲಿ ಶಾಲೆಯು ದಲಿತ ಸಮುದಾಯದ ಭವಿಷ್ಯಕ್ಕಾಗಿ ಜೆ.ಎಂ.ಎಸ್ ಮಾಡಿದ ಹೂಡಿಕೆಯಾಗಿತ್ತು; ಏಕೆಂದರೆ, 600 ಮಕ್ಕಳು ಜೆ.ಎಂ.ಎಸ್ ಚಾವಡಿ ಮೂಲಕವೇ ಹಾದು ಹೋಗಿದ್ದರು.





ನಮಗೆ ನ್ಯಾಯೋಚಿತವಾಗಿ ಸಲ್ಲಬೇಕಿರುವ ಸೌಲಭ್ಯಗಳನ್ನು, ಹಕ್ಕುಗಳನ್ನು, ಅಧಿಕಾರಗಳನ್ನು ನಾವು ಅರ್ಥಮಾಡಿಕೊಂಡಿದ್ದರಿಂದ ನಮ್ಮ ಮಕ್ಕಳು ಪುಸ್ತಕಗಳಾಚೆಗೆ ಹೋಗಿ, ಸುದ್ದಿಪತ್ರಿಕೆಗಳನ್ನು ಓದುವ ಮೂಲಕ ರಾಜಕೀಯವನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದರು.

ಸ್ಥಳೀಯ ಆಡಳಿತ ಕುರಿತಂತೆ ಭಾರತದ ಸಂವಿಧಾನಕ್ಕೆ 72ನೇ ಮತ್ತು 73ನೇ ತಿದ್ದುಪಡಿಗಳನ್ನು ಮಾಡುವ ಬಹಳ ಮುಂಚೆಯೇ ಕರ್ನಾಟಕ ರಾಜ್ಯವು ಪಂಚಾಯತ್ ರಾಜ್ ಸಂಸ್ಥೆಗಳನ್ನು ಜಾರಿಗೆ ತಂದಿತ್ತಾದರೂ ದಲಿತ ಮಹಿಳೆಯರು 2000ನೇ ಇಸ್ವಿಯ ತನಕ ಎಂದೂ ಗ್ರಾಮಸಭೆಗಳಲ್ಲಿ ಭಾಗವಹಿಸಿರಲಿಲ್ಲ: ಗ್ರಾಮ ಪಂಚಾಯತ್ ಕಚೇರಿಯ ಮೆಟ್ಟಿಲನ್ನೂ ಹತ್ತಿರಲಿಲ್ಲ. ಗ್ರಾಮ ಪಂಚಾಯತಿಗಳು ಆಗಿನ್ನೂ ಊರಿನ ಭೂಮಾಲಿಕರ ಮುಷ್ಟಿಯಲ್ಲಿದ್ದವು. ಯಾವಾಗಲಾದರೂ ಗ್ರಾಮಸಭೆಗಳು ನಡೆದರೆ ಅವುಗಳನ್ನು ದಲಿತರಿಗೆ, ಅದರಲ್ಲೂ ವಿಶೇಷವಾಗಿ ದಲಿತ ಮಹಿಳೆಯರಿಗೆ ಕಾಲಿಡುವುದಕ್ಕೂ ಸಾಧ್ಯವಿಲ್ಲದಂತಹ ಮೇಲ್ಜಾತಿಯವರ ಕೇರಿಗಳಲ್ಲಿ ನಡೆಸಲಾಗುತ್ತಿತ್ತು. ತಮ್ಮ ಸ್ಥಾನಗಳನ್ನು ಮರಳಿ ಪಡೆಯುವುದಕ್ಕಾಗಿ ದಲಿತರು "ನೋಡಿ ನಮ್ಮ ಗ್ರಾಮ ಪಂಚಾಯತಿ" ಎಂಬ ಘೋಷವಾಕ್ಯದಡಿಯಲ್ಲಿ ಸುದೀರ್ಘ ಅಭಿಯಾನವನ್ನೇ ನಡೆಸುವುದಕ್ಕೆ ಜೆ.ಎಂ.ಎಸ್ ಭದ್ರ ಭೂಮಿಕೆಯನ್ನು ಸಿದ್ಧಪಡಿಸಿಕೊಟ್ಟಿತು. ಕೆಲವೊಮ್ಮೆ ಈ ಅಭಿಯಾನವು ಊರ ಜನರಿಗೆ ಮುಂಚಿತವಾಗಿ ತಿಳಿಸದೇ ನಡೆಯುತ್ತಿದ್ದ ಗ್ರಾಮಸಭೆಗಳನ್ನು ರದ್ದು ಮಾಡಿಸುವ ಮಟ್ಟಕ್ಕೆ, ಗ್ರಾಮಸಭೆಗಳನ್ನು ನಡೆಸದ ಅಧಿಕಾರಿಗಳ ಜೊತೆ ವಾಗ್ವಾದ ನಡೆಸುವ ಮಟ್ಟಕ್ಕೆ ಹೋಗಿದ್ದುಂಟು.





ರಾಜಕೀಯ ವ್ಯವಸ್ಥೆಗಳ ಬಗ್ಗೆ ನಮ್ಮಲ್ಲಿ ಹೆಚ್ಚು ಜಾಗೃತಿ ಮೂಡಿದಂತೆಲ್ಲಾ ನಾವು ಗ್ರಾಮ
ಪಂಚಾಯತಿಗಳಲ್ಲಿನ ನಮ್ಮ ಸ್ಥಾನವನ್ನು ಮರಳಿ ಗಳಿಸಿಕೊಳ್ಳಲು ಮುಂದಾದೆವು.

ಕೆಲಸ ಮತ್ತು ಕೂಲಿಗಳೇ ಕೃಷಿ ಕೂಲಿಕಾರ್ಮಿಕರ ಜೀವನಾಡಿಗಳು. ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯು (ನರೇಗ) ಗ್ರಾಮೀಣ ಕುಟುಂಬಗಳಿಗೆ ವರ್ಷಕ್ಕೆ 100 ದಿನ ಕೆಲಸ ನೀಡುವ ಭರವಸೆ ನೀಡಿತು. ಆದರೆ, ಊರಿನ ಪ್ರಬಲ ವರ್ಗ ಮತ್ತು ಪಂಚಾಯತ್ ಸದಸ್ಯರ ನಡುವಿನ ಅನೈತಿಕ ನಂಟಿನಿಂದಾಗಿ ಕೆಲಸದಲ್ಲಿ ಯಂತ್ರಗಳನ್ನು ಬಳಸುವುದು, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಣ ನುಂಗುವುದು ಸರ್ವೇಸಾಮಾನ್ಯವಾಗಿಬಿಟ್ಟಿತ್ತು. ಇವು ಗ್ರಾಮೀಣ ಜನರಿಗೆ ನ್ಯಾಯೋಚಿತವಾಗಿ ಸಿಗಬೇಕಿದ್ದ ಕೆಲಸ ಮತ್ತು ಕೂಲಿಯನ್ನು ಕೊಡುವ ಹಾದಿಯಲ್ಲಿ ಅತಿದೊಡ್ಡ ಅಡಚಣೆಗಳಾಗಿ ನಿಂತಿದ್ದವು. ಈ ಯೋಜನೆಯಡಿಯಲ್ಲಿ 2009ರಲ್ಲಿ ಪ್ರತೀ ಕುಟುಂಬಕ್ಕೆ ವಾರ್ಷಿಕ ಸರಾಸರಿ ಕೇವಲ 8 ದಿನಗಳ ಕೆಲಸವನ್ನಷ್ಟೇ ನೀಡಲಾಗಿತ್ತು ವಾಸ್ತವಾಂಶದಿಂದಲೇ ಈ ಯೋಜನೆ ತಳಮಟ್ಟದಲ್ಲಿ ಯಾವ ರೀತಿಯಲ್ಲಿ ಅನುಷ್ಠಾನಗೊಳ್ಳುತ್ತಿತ್ತು ಎಂಬುದು ಅರ್ಥವಾಗುತ್ತದೆ. ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ (ಗ್ರಾಕೂಸ್) ಥರದ ದೊಡ್ಡ ಕೂಲಿಕಾರ್ಮಿಕ ಸಂಘಟನೆಗಳೊಂದಿಗೆ ಜೆ.ಎಂ.ಎಸ್ ಕೈಜೋಡಿಸಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಎಲ್ಲರಿಗೂ ವಾರ್ಷಿಕ 100 ದಿನಗಳ ಕೆಲಸ ಕೊಡಬೇಕೆಂಬ ಬೇಡಿಕೆಯಿಟ್ಟು ಹೋರಾಟ ನಡೆಸಿತು. ಒಂಬತ್ತು ಪಂಚಾಯತಿಗಳ ವ್ಯಾಪ್ತಿಯಲ್ಲಿ ಎರಡು ವರ್ಷಗಳ ಕಾಲ ನಿರಂತರವಾಗಿ ನಡೆದ ಜನಾಂದೋಲನದ ಪರಿಣಾಮವಾಗಿ ಈ ಭಾಗದಲ್ಲಿ 2011ರಲ್ಲಿ ಪ್ರತಿ ಕುಟುಂಬಕ್ಕೆ ವಾರ್ಷಿಕ ಸರಾಸರಿ 80 ದಿನಗಳ ಕೆಲಸ ಸಿಕ್ಕಿತು. ಕೆಲವು ಹಳ್ಳಿಗಳಲ್ಲಿ ಜನ ಆ ವರ್ಷ 100 ದಿನಗಳ ಕೆಲಸವನ್ನು ಗಿಟ್ಟಿಸಿಕೊಂಡರು! ಒಟ್ಟಿನಲ್ಲಿ, ಜೆ.ಎಂ.ಎಸ್‌ನ ಮೂರು ವರ್ಷಗಳ ನಿರಂತರ ಚಟುವಟಿಕೆಯಿಂದಾಗಿ ಕೃಷಿಕೂಲಿ ಕಾರ್ಮಿಕ ಸಮುದಾಯಗಳು 4.5 ಕೋಟಿ ರೂಪಾಯಿ ಮೊತ್ತದ ಕೆಲಸವನ್ನು ಮಾಡುವಲ್ಲಿ ಯಶಸ್ವಿಯಾದವು. ಭ್ರಷ್ಟಾಚಾರದ ವಿರುದ್ಧ ಹಲವು ಹಂತಗಳಲ್ಲಿ ನಡೆಸಿದ ಹೋರಾಟಗಳು, ಗ್ರಾಮ ಪಂಚಾಯತಿ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಂಡಿದ್ದು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದಕ್ಕೆ ನೆರವಾದವು.





ಕೆಲಸಕ್ಕಾಗಿ, ಕೂಲಿಗಾಗಿ ನಾವು ಹಲವು ಪ್ರತಿಭಟನಾ ಮೆರವಣಿಗೆಗಳನ್ನು, ಪ್ರದರ್ಶನಗಳನ್ನು ಸಂಘಟಿಸಿದೆವು; ನಮಗೆ ನ್ಯಾಯೋಚಿತವಾಗಿ ಸಿಗಬೇಕಾಗಿದ್ದ ಕೆಲಸವನ್ನು ಪಟ್ಟು ಹಿಡಿದು ಪಡೆದೆವು!

ಅತ್ಯಂತ ತುಳಿತಕ್ಕೊಳಗಾದ, ದಮನಿತ, ಭೂಹೀನ, ದಲಿತ ಮಹಿಳಾ ಕೃಷಿಕಾರ್ಮಿಕರೊಂದಿಗೆ ಕೆಲಸ ಮಾಡುವುದು ಎಂದರೆ ಯಾವುದೇ ರೀತಿಯ ಆರ್ಥಿಕ ಸಂಪನ್ಮೂಲಗಳಿಲ್ಲದ ಸಮಾಜದ ಕಟ್ಟಕಡೆಯ ಸಮುದಾಯವೊಂದರ ಜೊತೆಗೂಡಿ ಹೋರಾಡುವುದು ಎಂದೇ ಅರ್ಥ. ಅವರ ಪಾಲಿಗೆ ಬರೀ ಅರ್ಥಶಾಸ್ತ್ರದಾಚೆಗೆ ಬದುಕನ್ನು ಕಟ್ಟಿಕೊಳ್ಳುವುದೆಂದರೆ ತಮ್ಮ ಘನತೆಯನ್ನು ಮರಳಿ ಪಡೆಯುವುದೇ ಆಗಿತ್ತು. ಈ ಮಹಿಳೆಯರು ಊದಿನಕಡ್ಡಿ ತಯಾರಿಕೆ, ಹೋಲಿಗೆ ಮಾಡುವುದು, ಕಸೂತಿ ಮಾಡುವುದು, ಸಾವಯವ ಕೀಟನಾಶಕ ತಯಾರಿಕೆ, ಭತ್ತ ಮತ್ತಿತ್ತರ ಧ್ವಿದಳ ಧಾನ್ಯಗಳ ಸಾವಯವ ಕೃಷಿ, ಸಾಮುದಾಯಿಕ ಭೂ-ಅಭಿವೃದ್ಧಿ, ಹುಳುಗೊಬ್ಬರ ತಯಾರಿಕೆ, ಗಿಡಮೂಲಿಕೆ ಔಷಧಿ ತಯಾರಿಕೆ, ಟೆರ್ರಾಕೋಟ(ಆಭರಣಗಳು) ವಸ್ತುಗಳ ತಯಾರಿಕೆ, ಬೇವಿನಗೊಬ್ಬರ ತಯಾರಿಕೆ ಮುಂತಾದ ಅನೇಕ ರೀತಿಯ ಕೌಶಲ್ಯಗಳನ್ನು ಬೆಳೆಸಿಕೊಂಡರು. ಅಂದರೆ, ಮುಂದೊಂದು ದಿನ ಪ್ರತಿಫಲ ಸಿಕ್ಕೇ ಸಿಗುತ್ತದೆ ಎಂಬ ವಿಶ್ವಾಸದಲ್ಲಿ ಈ ಮಹಿಳೆಯರು ಅಪರಿಚಿತವಾದ ಕೆಲಸದಲ್ಲಿ ತಮ್ಮ ಅಮೂಲ್ಯ ಸಮಯವನ್ನು ವಿನಿಯೋಗಿಸಿ ಕಾರ್ಯನಿರ್ವಹಿಸಿದರು. ಯಾರ್‍ಯಾರು ಈ ಪ್ರಕ್ರಿಯೆಯಲ್ಲಿ ದೃಢವಾಗಿ ನಿಂತು ಕಾಲಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದರೋ ಅವರನ್ನೆಲ್ಲಾ ಟೆರ್ರಾಕೋಟ ಆಭರಣ ತಯಾರಿಕಾ ಘಟಕ, ಗಿಡಮೂಲಿಕೆ ಔಷಧಿ ತಯಾರಿಕಾ ಘಟಕ ಮತ್ತು ಬೇವಿನಗೊಬ್ಬರ ತಯಾರಿಕಾ ಘಟಕಗಳಲ್ಲಿ 'ಚಿಗುರು' ಎಂಬ ಸಂಘದಡಿಯಲ್ಲಿ ಸದೃಢೀಕರಣ ಮಾಡಲಾಯಿತು. ದೇಶದೊಳಗೆ ಮತ್ತು ಹೊರಗೆ ಅತ್ಯಂತ ಹೆಚ್ಚು ಬೇಡಿಕೆಯಲ್ಲಿರುವ ಟೆರ್ರಾಕೋಟ ಆಭರಣಗಳು ಕೆಲವು ಮಹಿಳೆಯರಿಗೆ ಬದುಕಿನ ಭದ್ರತೆ ಒದಗಿಸಿದ್ದು ಮಾತ್ರವಲ್ಲದೇ ಮಾರುಕಟ್ಟೆಯಲ್ಲಿ ಅತ್ಯುತ್ತಮ ಉತ್ಪನ್ನವಾಗಿರುವ ಅವು ಈ ಮಹಿಳೆಯರಿಗೆ ಒಂದು ರೀತಿಯ ಘನತೆಯನ್ನೂ ತಂದುಕೊಟ್ಟಿವೆ. ಹಲವು ಪ್ರದೇಶಗಳಲ್ಲಿ ಜೆ.ಎಂ.ಎಸ್ ಮಹಿಳೆಯರನ್ನು "ಚಿಗುರು" ಮಹಿಳೆಯರು ಎಂದೇ ಗುರುತಿಸಲಾಗುತ್ತದೆ.





ಗೋಜಲುಗೊಂಡು ಚದುರಿದ ನಮ್ಮ ಬದುಕಿನ ಭಾಗಗಳು ಒಂದೆಡೆ ಸೇರಿದಂತೆ ನಾವು ಟೆರ್ರಾಕೋಟ ಮಣಿಗಳನ್ನು ಆಭರಣಗಳಾಗಿ ಹೆಣೆದೆವು; ಅವು ಇತರರರ ಬದುಕನ್ನೂ ಅಂದಗೊಳಿಸಿದವು, ನಮ್ಮ ಬದುಕನ್ನೂ ಬೆಳಗಿದವು.


ಕಳೆದ 16 ವರ್ಷಗಳಿಂದ ಜೆ.ಎಂ.ಎಸ್ ನಡೆಸುವ ಚಿಲಿಪಿಲಿ ಶಾಲೆಯು ರಾಯಚೂರು ಜಿಲ್ಲೆಯಲ್ಲಿ ಸರ್ಕಾರದ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯ ಅಡಿಯಲ್ಲಿ ನಡೆಯುವ ಶಾಲೆಗಳಲ್ಲೆಲ್ಲಾ ಅತ್ಯುತ್ತಮ ಮಾದರಿ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮುಂದೆ ಸಾಮಾನ್ಯ ಶಾಲೆಗಳಲ್ಲಿ ಇತರ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸುವುದಕ್ಕೆ, ಆ ಶಾಲೆಗಳಲ್ಲಿ ತಮ್ಮದೇ ಅಸ್ತಿತ್ವ ಕಂಡುಕೊಳ್ಳುವುದಕ್ಕೆ ಹಾಗೂ ಅಲ್ಲಿಯೂ ಅತ್ಯುತ್ತಮ ಸಾಧನೆಗೈಯುವುದಕ್ಕೆ ಸಮರ್ಥರಾಗುವಂತೆ ಈ ಮಕ್ಕಳನ್ನು ಚಿಲಿಪಿಲಿ ಶಾಲೆಯಲ್ಲಿ ತಯಾರು ಮಾಡಲಾಗುತ್ತದೆ. ಅಷ್ಟೇ ಅಲ್ಲ, ಚಿಲಿಪಿಲಿ ಶಾಲೆಯು ನಾಟಕ, ಹಾಡು, ನೃತ್ಯ, ಕ್ರೀಡೆ, ತೆರೆದುಕೊಳ್ಳುವಿಕೆ ಮತ್ತು ಸಮುದಾಯದ ಒಳಗಿನ ಮತ್ತು ಹೊರಗಿನ ಗಣ್ಯ ವ್ಯಕ್ತಿಗಳೊಂದಿಗೆ ಒಡನಾಟ ಮುಂತಾದವುಗಳ ಮೂಲಕ ಸೃಜನಶೀಲವಾಗಿ ಕಲಿಕೆಯ ಕೇಂದ್ರವೂ ಆಗಿದೆ. ಎಲ್ಲಕ್ಕಿಂತ ಮಿಗಿಲಾಗಿ, ದಲಿತ ಸಮುದಾಯದ ಹುಡುಗ, ಹುಡುಗಿಯರು ಪರಸ್ಪರ ಒಬ್ಬರನ್ನೊಬ್ಬರು ಗೌರವಿಸುತ್ತಾ ಬದುಕುವುದಕ್ಕೆ, ಸ್ನೇಹಿತ–ಸ್ನೇಹಿತೆಯರಾಗಿ ಜೊತೆಗೂಡಿ ಬೆಳೆಯುವುದಕ್ಕೆ ಅನುವು ಮಾಡಿಕೊಡುವ ಬದುಕಿನ ಶಾಲೆಯಾಗಿ ಅದು ಬೆಳೆದಿದೆ. ಅಲ್ಲಿ ಕಲಿಯುವ ಮಕ್ಕಳು ಅಂಬೇಡ್ಕರ್, ಜ್ಯೋತಿಬಾ ಮತ್ತು ಸಾವಿತ್ರಿಬಾಯಿ ಫುಲೆ ಯಂತಹ ಮಹನೀಯರ ಜೀವನಗಾಥೆಗಳನ್ನು ಕೇಳಿರುವುದರಿಂದ ಅವರು ಜೆ.ಎಂ.ಎಸ್ ಸದಸ್ಯರೊಂದಿಗೆ, ತಮ್ಮದೇ ಸಮುದಾಯಗಳ ಜನರೊಂದಿಗೆ ಆತ್ಮೀಯವಾಗಿ ಒಡನಾಡುತ್ತಾರೆ.





ಚಿಲಿಪಿಲಿ ಶಾಲೆಯಲ್ಲಿ ಮಕ್ಕಳು ನೃತ್ಯ, ನಾಟಕ, ಕಲೆಗಳ ಮೂಲಕ ಕಲಿಯುತ್ತಲೇ ಅಲ್ಲಿನ ಪ್ರಶಾಂತವಾದ ಕಲಿಕೆಯ ಪರಿಸರವನ್ನು ಆಸ್ವಾದಿಸಿ ಆನಂದಿಸುತ್ತಾರೆ.

ಅರ್ಧ ಶತಮಾನದ ಕಾಲ ದಲಿತ ಮಹಿಳೆಯರು ರಾಷ್ಟ್ರಧ್ವಜ ಹಾರಿಸುವುದನ್ನು ನೋಡಿಯೇ ಇರಲಿಲ್ಲ. ಇನ್ನು ಕೆಲವರು, ಸಮೀಪದ ಶಾಲೆಯಲ್ಲಿ ಪ್ರತೀವರ್ಷ ಸ್ವಾಂತ್ರ್ಯೋತ್ಸವದ ದಿನದಂದು (ಆಗಸ್ಟ್ 15) ಅಥವಾ ಗಣರಾಜ್ಯೋತ್ಸವದ ದಿನದಂದು (ಜನವರಿ 26) ಧ್ವಜಾರೋಹಣ ಮಾಡಿದಾಗ ದೂರದಲ್ಲಿ ನಿಂತು ಮೂಕ ಪ್ರೇಕ್ಷಕರಾಗಿ ನೋಡುತ್ತಿದ್ದರು. ದಲಿತ ಸಮುದಾಯಗಳ ಬಹುತೇಕ ಮಕ್ಕಳು ಶಾಲೆಯಲ್ಲಿರುತ್ತಿರಲಿಲ್ಲ. ಹಳ್ಳಿಗಳಲ್ಲಿ ಚಿಲಿಪಿಲಿ ಶಾಲೆ ಪ್ರಾರಂಭವಾದ ಮೇಲೆ ಮೊದಲ ಬಾರಿಗೆ ದಲಿತ ಸಮುದಾಯಗಳ ಓಣಿಯಲ್ಲಿ ರಾಷ್ಟ್ರಧ್ವಜವನ್ನು ಸಂಘದ ಅಧ್ಯಕ್ಷೆ ಹಾರಿಸಿದರು. ಮುಖ್ಯವಾಹಿನಿಯ ಮಕ್ಕಳು, ಶಿಕ್ಷಕರು ಕನಿಷ್ಠ ವರ್ಷಕ್ಕೆ ಎರಡು ಬಾರಿಯಾದೂ ಚಿಲಿಪಿಲಿ ಶಾಲೆಗೆ ಭೇಟಿ ನೀಡುವ ಅನಿವಾರ್ಯಕ್ಕೊಳಗಾದರು.



ಕೆಲವೊಮ್ಮೆ

ನಾವು ಮಾತಾಡುವುದಕ್ಕೆ

'ಮೈಕ್'

ಬಳಸಿದೆವು:

ಇನ್ನು ಕೆಲವು ವೇಳೆ

ನಮ್ಮ ಸಮುದಾಯಗಳಲ್ಲಿ

ರಾಷ್ಟ್ರಧ್ವಜಗಳನ್ನು

ಹಾರಿಸಿದೆವು!



ಆಗತಾನೆ ಮುಂಗಾರು ವೈಫಲ್ಯದಿಂದ, ಘೋಷಿತ ಬರಗಾಲದಿಂದ ತತ್ತರಿಸಿ ನಿಧಾನಕ್ಕೆ ಚೇತರಿಸಿಕೊಳ್ಳುತ್ತಿದ್ದ ರಾಯಚೂರು ಜನರಿಗೆ ಉತ್ತರ ಕರ್ನಾಟಕ ಮತ್ತು ನೆರೆಯ ಆಂಧ್ರಪ್ರದೇಶದಲ್ಲಿ 2009ರ ಅಕ್ಟೋಬರ್ 1 ಮತ್ತು 2ರಂದು ಸುರಿದ ಭಾರಿ ಮಳೆ ಮತ್ತು ಅದು ಸೃಷ್ಟಿಸಿದ ಭೀಕರ ಪ್ರವಾಹ ಗಾಯದ ಮೇಲೆ ಬರೆ ಎಳೆದಿತ್ತು. ಈ ಮಹಾಪ್ರವಾಹದಿಂದ ಸುಮಾರು ಹತ್ತು ಲಕ್ಷ ಜನ ಸಂಕಷ್ಟಕ್ಕೆ ಸಿಲುಕಿದರು. ಪೋತ್ನಾಳದ ದಲಿತ ಕೇರಿಯಲ್ಲಿ ನೆಲೆಯೂರಿದ್ದ ಜೆ.ಎಂ.ಎಸ್ ಕಾರ್ಯಾಲಯ ಕೂಡ ಜಲಾವೃತವಾಗಿದ್ದರಿಂದ ಚಿಲಿಪಿಲಿ ಶಾಲೆಯ ಮಕ್ಕಳನ್ನು ರಾತ್ರೋರಾತ್ರಿ ಸುರಕ್ಷಿತ ಜಾಗಗಳಿಗೆ ಸ್ಥಳಾಂತರಿಸಲಾಯಿತು. ಸಲಕರಣೆಗಳು, ಸಾಮಗ್ರಿಗಳು, ಟೆರ್ರಾಕೋಟ ಆಭರಣಗಳು ಹಾಗೂ ಆಗತಾನೆ ತಯಾರಿಸಿದ್ದ ಬೇವಿನಗೊಬ್ಬರದ ಇಡೀ ರಾಶಿ ಎಲ್ಲವೂ ಈ ಪ್ರವಾಹದಲ್ಲಿ ಕೊಚ್ಚಿಹೋಗಿದ್ದರಿಂದ ಜೆ.ಎಂ.ಎಸ್‌ಗೆ ಆರ್ಥಿಕವಾಗಿ ಭಾರಿ ನಷ್ಟವಾಯಿತು. ಹಲವಾರು ಹಳ್ಳಿಗಳೂ ದೊಡ್ಡ ಮಟ್ಟದ ನಷ್ಟವನ್ನು ಅನುಭವಿಸಿದವು. ಆ ಸಮಯದಲ್ಲಿ ಜೆ.ಎಂ.ಎಸ್ ಎದುರಿಸಿದ ಅತಿದೊಡ್ಡ ಸವಾಲು ಎಂದರೆ ಬದುಕು ಮತ್ತು ಬದುಕಿನ ನೆಲೆಗಳನ್ನು ಮರುನಿರ್ಮಾಣ ಮಾಡುವುದು.





2009ರ ಉತ್ತರ ಕರ್ನಾಟಕದ ಪ್ರವಾಹದಲ್ಲಿ ನಮ್ಮ ಜೆ.ಎಂ.ಎಸ್ ಕಾರ್ಯಾಲಯ ಮತ್ತು ಆವರಣ ಸರ್ವನಾಶವಾಯಿತು. ಅದೇ ರೀತಿಯಲ್ಲಿ ಸುತ್ತಮುತ್ತಲಿನ ಹಳ್ಳಿಗಳೂ ಕೂಡ ಧ್ವಂಸಗೊಂಡಿದ್ದವು. ಆದರೆ, ನಮ್ಮ ಬದುಕುಗಳನ್ನು ಮತ್ತೆ ಕಟ್ಟಿಕೊಂಡೆವು.

2011ರಲ್ಲಿ ನಡೆದ ಜಾಗೃತ ಮಹಿಳಾ ಸಂಘಟನೆಯ ದಶಮಾನೋತ್ಸವ ಆಚರಣೆಯು ಸಂಘಟನೆಯ ನಾಯಕತ್ವ ಆಯೋಜಿಸಿದ ಅತಿಮುಖ್ಯ ಮೈಲಿಗಲ್ಲಾಗಿತ್ತು. ಅದಕ್ಕಿಂತ ಮೊದಲು ಜೆ.ಎಂ.ಎಸ್‌ಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿದ್ದವು. 2011ರಲ್ಲಿ, ಸಮಾಜಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡಿದ ದಲಿತ ಸಮುದಾಯದ ವ್ಯಕ್ತಿಗಳನ್ನು ಗುರುತಿಸಿ ಸನ್ಮಾನಿಸುವ ಮೂಲಕ ಜಾಗೃತ ಮಹಿಳಾ ಸಂಘಟನೆಯು ದಲಿತ ಸಮುದಾಯದ ಸಬಲೀಕರಣದ ಸಂಕೇತವಾಗಿ ಹೊರಹೊಮ್ಮಿತು. ದಲಿತ ಬರಹಗಾರರಿಗೆ, ಕವಿಗಳಿಗೆ, ಸಾಂಪ್ರದಾಯಿಕವಾಗಿ ಹೆರಿಗೆ ಮಾಡಿಸುತ್ತಿದ್ದ ದಲಿತ ಮಹಿಳೆಯರಿಗೆ, ಸಾಂಪ್ರದಾಯಿಕವಾಗಿ ಔಷಧೋಪಚಾರ ಮಾಡುತ್ತಿದ್ದ ದಲಿತ ಚಿಕಿತ್ಸಕರಿಗೆ ಸಂಘಟನೆಯು ಪ್ರಶಸ್ತಿಗಳನ್ನು ನೀಡಿ ಗೌರವಿಸಿತು. ದಲಿತ ಮಹಿಳೆಯರಿಗೆ ತಮ್ಮ ಸಂಘಟನಾ ಕೌಶಲ್ಯ, ಮಾತುಕತೆ ನಡೆಸುವ ಚಾಕಚಕ್ಯತೆ, ಸಭೆಸಮಾರಂಭಗಳನ್ನು ಸಂಘಟಿಸುವ ಸಾಮರ್ಥ್ಯಗಳನ್ನು ಪ್ರದರ್ಶಿಸುವುದಕ್ಕೆ ಈ ಸಂಭ್ರಮಾಚರಣೆಗಳು ವೇದಿಕೆಯಾಗಿದ್ದವು. ಅಷ್ಟೇ ಅಲ್ಲದೇ, ತಮ್ಮ ಸಮುದಾಯದ ಇತರ ಮಹಿಳೆಯರಲ್ಲಿ ಆತ್ಮವಿಶ್ವಾಸ ಮತ್ತು ಶಕ್ತಿಯನ್ನು ತುಂಬುವಲ್ಲಿಯೂ ಅವು ಬಹಳ ನೆರವಾದವು.






ಒಂದು ಸಮಷ್ಟಿಯಾಗಿ ದಶಮಾನೋತ್ಸವ ಆಚರಿಸಿದ್ದು "ಸಂಘರ್ಷ"ಕ್ಕಾಗಿನ ನಮ್ಮ ಕಟಿಬದ್ಧತೆಯನ್ನು ಇನ್ನಷ್ಟು ಗಟ್ಟಿಗೊಳಿಸಿತು.

ಚಿಲಿಪಿಲಿ ಶಾಲೆಯ ಮೂಲಕ 600ಕ್ಕೂ ಹೆಚ್ಚು ಶಾಲೆತೊರೆದ ಮಕ್ಕಳಿಗೆ (ಅವರಲ್ಲಿ ಅರ್ಧದಷ್ಟು ಹುಡುಗಿಯರಿದ್ದರು) ಶಿಕ್ಷಣ ನೀಡಿ ಅವರ ಭವಿಷ್ಯ ರೂಪಿಸಿದ್ದು ಜೆ.ಎಂ.ಎಸ್ ಮಾಡಿದ ಬಹುಮುಖ್ಯ ಸಾಹಸಕಾರ್ಯ. ಈ ಶಾಲೆತೊರೆದ ಮಕ್ಕಳಲ್ಲಿ ಬಹುತೇಕರು ಗುಲಾಮಚಾಕರಿ ಮಾಡಿಕೊಂಡಿರಬೇಕಾದ ದುಸ್ಥಿತಿ ಎದುರಿಸಬೇಕಾಗುತ್ತಿತ್ತು. ಆದರೆ, ಜೆ.ಎಂ.ಎಸ್‌ನ ಪ್ರಯತ್ನದಿಂದಾಗಿ ಅವರಲ್ಲಿ ಬಹುತೇಕ ಮಕ್ಕಳು ವಿವಿಧ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿದ್ದರೆ, ಇನ್ನು ಕೆಲವರು ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ. ಈ ಹೊಸ ಪೀಳಿಗೆಯು ಜೀತಪದ್ಧತಿ ಮತ್ತು ಇತರ ಸ್ವರೂಪದ ಗುಲಾಮಗಿರಿಯ ಸಂಕೋಲೆಗಳನ್ನು ಮುರಿಯುವ ಭರವಸೆ ತೋರುತ್ತಿದೆ.





ನಮ್ಮ ಮಕ್ಕಳಿಗಾಗಿ ನಾವು "ನವನಿರ್ಮಾಣ"ದ ಕನಸು ಕಂಡೆವು;
ಅದು ಭರವಸೆ ಮತ್ತು ಹೊಸ ಪ್ರಪಂಚದ ಕನಸು.

ಸಮುದಾಯಕ್ಕಾಗಿ, ಸಮುದಾಯದ ಹಕ್ಕುಗಳಿಗಾಗಿ ಹೋರಾಟ ನಡೆಸಿದ ಅನೇಕ ಮಹಿಳಾ ನಾಯಕಿಯರು ನಿರಂತರವಾಗಿ ತೋರಿದ ವಿಶ್ವಾಸಾರ್ಹತೆಯ ಕಾರಣದಿಂದಾಗಿಯೇ ಜೆ.ಎಂ.ಎಸ್‌ಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮನ್ನಣೆ ದೊರಕಿತು. ಈ ಮನ್ನಣೆಯು ಹಲವು ಮೂಲೆಗಳಿಂದ ಬಂದಿದೆ – ನಾಗರಿಕ ಸಮಾಜದಿಂದ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ, ಮಾಧ್ಯಮದಿಂದ, ಅನೇಕ ಹಿತೈಷಿಗಳಿಂದ ಮತ್ತು ಸ್ನೇಹಿತರಿಂದ. ಚಿಗುರು-ಜೆ.ಎಂ.ಎಸ್ ಅಡಿಯಲ್ಲಿ ನಡೆಯುತ್ತಿದ್ದ ಬೇವಿನಗೊಬ್ಬರ ಉತ್ಪಾದನೆಯನ್ನು ದಿ ಸಿಟಿ ಗ್ರೂಪ್ ಸಂಸ್ಥೆಯು ಸ್ಪರ್ಧಾತ್ಮಕ ಆಯ್ಕೆಯ ಪ್ರಕ್ರಿಯೆಯ ಮೂಲಕ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಿತು (2008). ಜೆ.ಎಂ.ಎಸ್ ಅಧ್ಯಕ್ಷೆ – ಸಂಚಾಲಕಿ ಚಿನ್ನಮ್ಮ ಅವರಿಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗ ಮತ್ತು ರಾಷ್ಟ್ರೀಯ ಮಹಿಳಾ ಆಯೋಗಗಳು ಸಮುದಾಯ ನಾಯಕತ್ವಕ್ಕಾಗಿ ಪ್ರಶಸ್ತಿ ನೀಡಿ ಗೌರವಿಸಿದವು (2012). ಅಲ್ಲದೇ ಜೆ.ಎಂ.ಎಸ್‌ನ ಅನೇಕ ಸದಸ್ಯರಿಗೂ ಹಲವು ರೀತಿಯ ಪ್ರಶಸ್ತಿ, ಪುರಸ್ಕಾರಗಳು ಲಭಿಸಿವೆ.




ವಿಜಯ ಕರ್ನಾಟಕ 29/12/07

# ಉತ್ತಮ ಸಮಾಜಕ್ಕೆ 'ಝಾನ್ಸಿ ರಾಣಿ ಮಹಿಳಾ ಸಂಘ'

ರಸ್ತೆ ದುರಸ್ತಿಯಲ್ಲಿ ತೊಡಗಿರುವ ಝಾನ್ಸಿರಾಣಿ ಮಹಿಳಾ ಸಂಘದ ಸದಸ್ಯೆಯರು.

**ಸಂಘದ ಸದಸ್ಯರಿವರು**

**ಅಚ್ಚುಕಟ್ಟು ಕೆಲಸ**

**ಉಳಿತಾಯ**

**ಮಾದರಿ ಸಂಘ**

ಬೇವಿನ ಗೊಬ್ಬರ ಉತ್ಪಾದನೆಯಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದ ಚಿನ್ನಮ್ಮ.



ಘನತೆ ಮತ್ತು ನ್ಯಾಯವನ್ನು ಮರಳಿ ಪಡೆಯುವುದಕ್ಕಾಗಿನ ನಮ್ಮ ಹೋರಾಟ ನಿರಂತರವಾಗಿ ಮುಂದುವರೆಯುತ್ತಿದೆ ಎಂಬುದನ್ನು ನಮಗೆ ಸಿಗುತ್ತಿರುವ ಈ ಮನ್ನಣೆ, ಪ್ರಶಸ್ತಿ–ಪುರಸ್ಕಾರಗಳೇ ಸಾಕ್ಷೀಕರಿಸುತ್ತವೆ.

ಜಾಗೃತ ಮಹಿಳಾ ಸಂಘಟನೆಗೆ ಮಾರ್ಗದರ್ಶಿಯಾಗಿದ್ದ "ಸಂಘರ್ಷ ಮತ್ತು ನವನಿರ್ಮಾಣ" ಎಂಬ ಆದರ್ಶ ಪರಿಕಲ್ಪನೆಗಳು ವಾಸ್ತವದಲ್ಲಿ ನರ್ಮದಾ ಬಚಾವೋ ಆಂದೋಲನ (ಎನ್.ಬಿ.ಎ), ರಾಷ್ಟ್ರೀಯ ಪ್ರಜಾಚಳುವಳಿಗಳ ಒಕ್ಕೂಟ (ಎನ್.ಎ.ಪಿ.ಎಂ) ಮುಂತಾದ ರಾಷ್ಟ್ರ ಮಟ್ಟದಲ್ಲಿ ಮುನ್ನಾಗುತ್ತಿದ್ದ ವೀರೋಚಿತ ಜನಹೋರಾಟಗಳಿಂದ ಪ್ರೇರಿತವಾಗಿದ್ದವು. ಅಭಿವೃದ್ಧಿಯ ಮಾದರಿಗಳನ್ನು ಅತ್ಯಂತ ತುಳಿತಕ್ಕೊಳಗಾಗಿ ಸಮಾಜದ ಕೊಟ್ಟ ಕೊನೆಯಲ್ಲಿ ನಿರ್ಗತಿಕ ಬದುಕು ಸಾಗಿಸುತ್ತಿರುವ ಜನಸಮುದಾಯಗಳ ದೃಷ್ಟಿಕೋನದಿಂದ ನೋಡಿ, ಅಭಿವೃದ್ಧಿ ಎಂದರೆ ಯಾರ ಅಭಿವೃದ್ಧಿ, ಯಾವ ರೀತಿಯ ಅಭಿವೃದ್ಧಿ ಎಂದು ಪ್ರಶ್ನಿಸುತ್ತಾ ಅರ್ಥಪೂರ್ಣವಾದ, ಔಚಿತ್ಯಪೂರ್ಣವಾದ ಪರ್ಯಾಯ ಅಭಿವೃದ್ಧಿ ಮಾದರಿಗಳ ಹುಡುಕಾಟಕ್ಕೆ ಈ ಪರಿಕಲ್ಪನೆ ನೆರವಾಯಿತು.

ರಾಯಚೂರಿನಲ್ಲಿ, ಜಾತಿ ಹಿಂಸೆ, ದಲಿತ ಮಾದಿಗ ಮಹಿಳೆಯರ ಮೇಲೆ ಇತರ ಜಾತಿಗಳ ಜನರು ನಡೆಸುವ ದೌರ್ಜನ್ಯ, ದಲಿತ ಮಹಿಳೆಯರ ಮೇಲೆ ತಮ್ಮ ಕುಟುಂಬದ ಒಳಗೇ ನಡೆಯುವ ದೌರ್ಜನ್ಯ, ಬಹುತೇಕ ಕೃಷಿ ಭೂಮಿಯ ಒಡೆಯರಾಗಿರುವ ಮೇಲ್ಜಾತಿಯ ಬಲಿಷ್ಠ ಭೂಮಾಲಿಕರು ತಮ್ಮ ಭೂಮಿಯಲ್ಲಿ ಕಡುಬಡತನದಲ್ಲಿ ನಿರ್ಗತಿಕರಾಗಿ ಬದುಕುತ್ತಿದ್ದ ದಲಿತರನ್ನು ಜೀತದಾಳುಗಳಿಗಿಂತ ಭಿನ್ನವಾಗಿಲ್ಲದ ಪರಿಸ್ಥಿತಿಯಲ್ಲಿ ದುಡಿಸಿಕೊಳ್ಳುತ್ತಾ ಸಮಾಜದಲ್ಲಿ ಅವರು ಹೊಂದಿದ್ದ ದಮನಕಾರಿ ಆರ್ಥಿಕ ಮತ್ತು ಸಾಮಾಜಿಕ ನಿಯಂತ್ರಣ – ಈ ಕಟುವಾಸ್ತವಗಳೇ ನ್ಯಾಯ ಮತ್ತು ಸಮಾನತೆಗಾಗಿನ ಹೋರಾಟಕ್ಕೆ ಜಾಗೃತ ಮಹಿಳಾ ಸಂಘಟನೆಯನ್ನು ಪ್ರೇರೇಪಿಸಿದ್ದು. ರಾಯಚೂರಿನಲ್ಲಿ, ದಲಿತ ಮಾದಿಗ ಸಮುದಾಯಗಳಿಗೆ ಔಚಿತ್ಯಪೂರ್ಣವಾಗಿ ಕಂಡುಬಂದ ಈ ಪರ್ಯಾಯ ರೂಪಾವಳಿಯು ವಾಸ್ತವದಲ್ಲಿ ಘನತೆ ಮತ್ತು ನ್ಯಾಯಕ್ಕಾಗಿನ ಹುಡುಕಾಟವೇ ಆಗಿತ್ತು.



ಜಾಗೃತ ಮಹಿಳಾ ಸಂಘಟನೆಯ ಹೆಸರು ಮತ್ತು ಅಸ್ಮಿತೆಗಳು ಅನ್ಯಾಯವನ್ನು ಮುಖಾಮುಖಿಯಾಗಿ ಎದುರಿಸುತ್ತಾ ಕಲಿತುಕೊಂಡ ಸಾಮಾಜಿಕ ನ್ಯಾಯ ಮತ್ತು ಮಾನವ ಘನತೆಯ ಅರ್ಥಪೂರ್ಣ ಪಯಣವನ್ನು ಸಂಕೇತಿಸುತ್ತವೆ. ತಮ್ಮ ತಮ್ಮ ಸ್ಥಾನಮಾನ ಮತ್ತು ಘನತೆಗಳನ್ನು ಮರಳಿ ಪಡೆಯುವುದಕ್ಕಾಗಿ ಅನ್ಯಾಯವನ್ನು ಮುಖಾಮುಖಿಯಾಗಿ ಎದುರಿಸುವುದು, ಸಾರ್ವಜನಿಕ ಪ್ರತಿಭಟನಾ ಪ್ರದರ್ಶನಗಳನ್ನು ಮಾಡುವುದು ಮುಂತಾದ ನಿರಂತರ ಪ್ರಕ್ರಿಯೆಗಳ ಮೂಲಕ ಜಾತಿ ಮತ್ತು ಲಿಂಗಾಧಾರಿತ ಅಧಿಕಾರ ಸಂಬಂಧಗಳಲ್ಲಿ ಹೂತುಹೋಗಿರುವ ವ್ಯವಸ್ಥೆಯ ವಿರುದ್ಧ ಹೋರಾಡುವುದಕ್ಕೆ ದಲಿತ ಮಹಿಳಾ ಸಮುದಾಯವನ್ನು ಈ ಮಹಿಳಾ ಸಂಘಟನೆ ಪ್ರೇರೇಪಿಸಿತು. ಆರಂಭದಲ್ಲಿ ಪೋತ್ನಾಳದ ದಲಿತ ದೇವತೆ ಕೆಂಚಮ್ಮನ ದೇವಸ್ಥಾನದ ಬಳಿ ತಲೆಯೆತ್ತಿದ್ದ ಈ ಜೆ.ಎಂ.ಎಸ್ ಕೇಂದ್ರ 2004ರಿಂದೀಚೆಗೆ ದಲಿತ ಜಾಗೃತಿ ಮತ್ತು ವಿಮೋಚನೆಯ ಕಾರ್ಯಕೇಂದ್ರವಾಗಿ ಹೊರಹೊಮ್ಮಿದೆ. ಕೆಲವು ಮುಖ್ಯ ಮಹಿಳಾ ನಾಯಕಿಯರು ಸ್ವಯಂಪ್ರೇರಿತವಾಗಿ ಸಂಘಟನೆಗೆ ಸೇರಿ ಎಲ್ಲಾ ಸ್ವರೂಪದ ಸಾಮಾಜಿಕ ಅನ್ಯಾಯದ ವಿರುದ್ಧ ಪ್ರತಿರೋಧಿ ಹೋರಾಟವನ್ನು (ಸಂಘರ್ಷ) ಕಟ್ಟುವ ಉದ್ದೇಶದಿಂದ ದಮನಿತ ಸಮುದಾಯಗಳನ್ನು ಅಣಿನೆರೆಸಲು ಪ್ರಾರಂಭಿಸಿದ ಮೇಲೆ, ಮತ್ತಿತರರು ಮರುನಿರ್ಮಾಣ ಮತ್ತು ಮರುಸೃಜನಶೀಲ ಚಟುವಟಿಕೆಗಳನ್ನು (ನವನಿರ್ಮಾಣ) ಮತ್ತಷ್ಟು ಕ್ರಿಯಾಶೀಲವಾಗಿ ಮುಂದುವರೆಸಲು ಪ್ರಾರಂಭಿಸಿದ ಮೇಲೆ ಈ ಹೋರಾಟದ ಪಯಣಕ್ಕೊಂದು ಹೊಸ ರಭಸ ಬಂದಿದೆ. ಕೆಲಸದ ಹಕ್ಕು, ಆರೋಗ್ಯದ ಹಕ್ಕು, ಆಹಾರದ ಹಕ್ಕುಗಳನ್ನು ಪಡೆಯುವುದಕ್ಕಾಗಿ ನಡೆಯುತ್ತಿರುವ ಹೋರಾಟಗಳ ಮೂಲಕ "ಸಂಘರ್ಷ"ಕ್ಕೆ ನೀಡುವ ಒತ್ತು ಮುಂದುವರೆದಿದೆ. ಹಕ್ಕು, ನ್ಯಾಯ, ಘನತೆಗಾಗಿ ನಡೆಯುತ್ತಿದ್ದ ಅಭಿಯಾನಗಳು ಮತ್ತು ಸಂಘರ್ಷಗಳು ಕೇವಲ ಮಾದಿಗ ಮಹಿಳೆಯರ ಹೋರಾಟಗಳಾಗಿ ಅಷ್ಟೇ ಉಳಿಯದೇ ತಮ್ಮ ತಳಹದಿಯನ್ನು ವಿಸ್ತರಿಸಿಕೊಂಡು ಒಟ್ಟಾರೆ ಅಸಂಘಟಿತ ಕಾರ್ಮಿಕರ ಹೋರಾಟಗಳಾಗಿ ಬೆಳೆಯಲಾರಂಭಿಸಿವೆ.

ವಿಮೋಚನೆಯ ಪಯಣ ಬಹಳ ಸುದೀರ್ಘವಾಗಿರುವಂತಹದ್ದು; ಆ ನಿಟ್ಟಿನಲ್ಲಿ ಅದಿನ್ನೂ ನಿರ್ಣಾಯಕ ಹಂತಕ್ಕೆ ಬೆಳೆಯಬೇಕಿದೆ. ಈ ಸಣ್ಣ ಸಾಮಾಜಿಕ ಪ್ರಯೋಗ ಹೊತ್ತಿಸಿದ ಜಾಗೃತಿಯ ಕಿಡಿಗಳು ಬಹಳಷ್ಟು ಜನರಿಗೆ ಪ್ರೇರಣೆಯಾಗುತ್ತವೆ, ತಳಸಮುದಾಯಗಳಲ್ಲಿ ಜಾಗೃತಿಯ ಬೆಂಕಿ ಸದಾ ಉರಿಯುವಂತೆ ನೋಡಿಕೊಳ್ಳುವುದಕ್ಕಾಗಿ ಹೆಚ್ಚೆಚ್ಚು ಜನರನ್ನು ಆಕರ್ಷಿಸುತ್ತವೆ ಎಂದು ನಾವು ಬಹಳ ವಿನಮ್ರವಾಗಿ ಆಶಿಸುತ್ತೇವೆ. ದಲಿತ ಮಹಿಳೆಯರನ್ನು ಇಂದಿಗೂ ಆವರಿಸಿರುವ ಕತ್ತಲು, ಕಷ್ಟಕಾರ್ಪಣ್ಯಗಳನ್ನು ತೊಡೆಯುವುದಕ್ಕೆ ನಾವೂ ಅವರೊಂದಿಗೆ ಆತ್ಮಸ್ಥೈರ್ಯದಿಂದ ತಲೆಯೆತ್ತುತ್ತಾ, ಪಾದಗಳನ್ನು ಗಟ್ಟಿಯಾಗಿ ಊರುತ್ತಾ, ನಡೆಯುತ್ತಾ, ಬೀಳುತ್ತಾ, ಏಳುತ್ತಾ ಹೆಜ್ಜೆ ಹಾಕುತ್ತೇವೆ.

"ಸಂಘರ್ಷ ಮತ್ತು ನವನಿರ್ಮಾಣ"ದ ಪ್ರಕ್ರಿಯೆಯಲ್ಲಿ ವಿಶ್ವಾಸವಿಟ್ಟು ಇಲ್ಲಿಯ ತನಕ ನಮ್ಮೊಂದಿಗೆ ದೃಢವಾಗಿ ಹೆಜ್ಜೆ ಹಾಕಿದ ಹಾಗೂ ಆ ಮೂಲಕ ತಮಗೆ ನ್ಯಾಯಬದ್ಧವಾಗಿ ಸಲ್ಲಬೇಕಿರುವ ಘನತೆ, ಗೌರವಗಳನ್ನು ತಮ್ಮ ಹಕ್ಕಾಗಿ ಕೇಳುವುದಕ್ಕೆ ಇಡೀ ಸಮುದಾಯವನ್ನು ಪ್ರೇರೇಪಿಸಿದ ನೂರಾರು ದಲಿತ ಮಾದಿಗ ಮಹಿಳೆಯರಿಗೆ ನಾವು ಹೃದಯತುಂಬಿದ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಜಾಗೃತ ಮಹಿಳಾ ಸಂಘಟನೆಯು ರಾಜ್ಯದ, ರಾಷ್ಟ್ರದ, ಅಷ್ಟೇ ಏಕೆ ಇಡೀ ವಿಶ್ವದ ಅರ್ಥಪೂರ್ಣ ಮಾನವ ಅಭಿವೃದ್ಧಿಯ ನಕಾಶೆಯಲ್ಲಿ ಸ್ಥಾನಪಡೆದಿರುವುದಕ್ಕೆ ಈ ದಲಿತ ಮಹಿಳೆಯರ ತ್ಯಾಗಶೀಲ ಪರಿಶ್ರಮವೇ ಕಾರಣ.

ನಾವು ನಿಲ್ಲುವುದಿಲ್ಲ...! ಈ ಪಯಣ ಮುನ್ಸಾಗುತ್ತದೆ...!!

**ಜೈ ಭೀಮ್ ..!  ಜಿಂದಾಬಾದ್..!!**



ನಿಮಗೆ ನನ್ನ ಅಂತಿಮ ಕಿವಿನುಡಿ ಏನೆಂದರೆ – ಶಿಕ್ಷಿತರಾಗಿರಿ, ಸಂಘರ್ಷಿಸಿರಿ ಮತ್ತು ಸಂಘಟಿತರಾಗಿರಿ; ನಿಮ್ಮ ಮೇಲೆಯೇ ನಿಮಗೆ ವಿಶ್ವಾಸವಿರಲಿ.
ನ್ಯಾಯ ನಮ್ಮ ಕಡೆ ಇರುವಾಗ ನಮ್ಮ ಹೋರಾಟದಲ್ಲಿ ನಾವು ಸೋಲುತ್ತೇವೆ ಎಂದು ನನಗನ್ನಿಸುವುದಿಲ್ಲ.
ನನ್ನ ಪಾಲಿಗೆ ಹೋರಾಟವೆಂಬುದು ಸಂತಸದ ವಿಷಯ. ಹೋರಾಟ ಪರಿಪೂರ್ಣ ಅರ್ಥದಲ್ಲಿ ಆಧ್ಯಾತ್ಮವೇ ಆಗಿದೆ.
ಅದರಲ್ಲಿ (ಕೇವಲ) ಭೌತಿಕವಾಗಿರುವಂತಹದ್ದು ಅಥವಾ (ಕೇವಲ) ಸಾಮಾಜಿಕವಾಗಿರುವಂತಹದ್ದು ಏನೂ ಇಲ್ಲ.
ನಮ್ಮದು ಸಂಪತ್ತಿಗಾಗಿನ ಅಥವಾ ಅಧಿಕಾರಕ್ಕಾಗಿನ ಹೋರಾಟವಲ್ಲ.
ನಮ್ಮದು ಸ್ವಾತಂತ್ರ್ಯಕ್ಕಾಗಿನ ಹೋರಾಟ.
ಮಾನವ ವ್ಯಕ್ತಿತ್ವವನ್ನು ಮರಳಿ ಗಳಿಸುವುದಕ್ಕಾಗಿನ ಹೋರಾಟ.

ಡಾ. ಬಿ.ಆರ್. ಅಂಬೇಡ್ಕರ್